MAA ಫ್ರೆಂಡ್ಸ್ ಸಾರಥ್ಯದಲ್ಲಿ...

# ಯುವ ಮಾರ್ಗ

ಕನ್ನಡ ದಿನಪತ್ರಿಕೆ "ಇದು ರಾಷ್ಟ್ರದ ಧ್ವನಿ"

ಸಂಪಾದಕರು : ಅನಿಲ ಕುಮಾರ್ ಹೆಚ್ Cell : 9743497111

YUVA MARGA KANNADA DAILY NEWS PAPER

ಪ್ರಧಾನ ಸಂಪಾದಕರು : ಮನೋಜ ಮಿಶ್ರಾ Cell : 9743496111

ಸಂಪುಟ: 04 | ಸಂಚಿಕೆ: 211 | ಗುರುವಾರ : 05-06-2025 | ರಾಯಚೂರು | RNI NO: KARKAN/2022/90446 | ಪುಟ: 4 | ಬೆಲೆ: ರೂ: 2-00

VOLUME: 04 | ISSUE: 211 | THURSDAY : 05-06-2025 | RAICHUR | EMAIL: YUVAMARGA@GMAIL.COM | PAGE: 4 | PRICE: Rs: 2-00

## ಕೊಹ್ಲಿ ವರ್ತನೆ ಅರ್ಥಪೂರ್ಣವಾಗಿದೆ : ಪಾಂಟಿಂಗ್



**ಅಹಮದಾಬಾದ್, ಜೂ.4–** ವಿರಾಟ್ ಕೊಹ್ಲಿ ಮೊಣಕಾಲೂರಿ ಅಳುತ್ತಾ ಕುಳಿತಿದ್ದು, ಕಳೆದ 18 ವರ್ಷಗಳಿಂದ ಐಪಿಎಲ್ ಪ್ರಶಸ್ತಿಗಾಗಿ ಅವರು ಎಷ್ಟು ಹಂಬಲಿಸುತ್ತಿದ್ದರು ಮತ್ತು ಪಂದ್ಯಾವಳಿಯನ್ನು ಗೆಲ್ಲುವುದು ಆಟಗಾರರಿಗೆ ಎಷ್ಟು ಅರ್ಥಪೂರ್ಣವಾಗಿದೆ ಎಂಬುದನ್ನು ತೋರಿಸುತ್ತದೆ ಎಂದು ಪಂಜಾಬ್ ಕಿಂಗ್ಸ್ ನ ಮುಖ್ಯ ಕೋಚ್ ರಿಕಿ ಪಾಂಟಿಂಗ್ ಹೇಳಿದರು.

# ಅರ್‌ಸಿಬಿ ಸಂಭ್ರಮಾಚರಣೆ ವೇಳೆ ದುರಂತ

## ಹಲವು ಜನರ ಸಾವು : ತಲಾ 10 ಲಕ್ಷ ರೂ. ಪರಿಹಾರ ಘೋಷಣೆ

**ಬೆಂಗಳೂರು,ಜೂ.4–** ಚಿನ್ನಸ್ವಾಮಿ ಕ್ರೀಡಾಂಗಣ ಒಳಗೆ ಪ್ರವೇಶಿಸಲು ಉಂಟಾದ ನೂಕುನುಗ್ಗಲಿನಲ್ಲಿ 11 ಮಂದಿ ಮೃತಪಟ್ಟಿದ್ದಾರೆ. ದುರಂತದಲ್ಲಿ ಒಬ್ಬ ಮಹಿಳೆ ಹಾಗೂ ಐವರು ಪುರುಷರಿದ್ದಾರೆ ಎಂದು ಮೂಲಗಳು ತಿಳಿಸಿವೆ. ವೈದೇಹಿ ಆಸ್ಪತ್ರೆ ಹಾಗೂ ಬೋರಿಂಗ್ ಆಸ್ಪತ್ರೆಯಲ್ಲಿ ಮೃತದೇಹವಿದ್ದು ಕುಟುಂಬ ಸದಸ್ಯರ ಆಕ್ರಂದನ ಮುಗಿಲುಮಟ್ಟಿದೆ. ಏಕಾಏಕಿ ಗೇಟ್ ತೆಗೆದಾಗ ಪ್ರಯತ್ನಿಸಿದಾಗ 30ಕ್ಕೆ ಹೆಚ್ಚು ಮಂದಿ ಕಾಲ್ತುಳಿತಕ್ಕೆ ಒಳಗಾಗಿದ್ದಾರೆ ಇದರಲ್ಲಿ 30 ಕ್ಕೂ



ಹೆಚ್ಚು ಮಂದಿ ಅಸ್ವಸ್ಥಗೊಂಡಿದ್ದು ಅವರನ್ನು ಹತ್ತಿರದ ಬೌರಿಂಗ್ ಆಸ್ಪತ್ರೆಗೆ ದಾಖಲಿಸಲಾಗಿದೆ.

ಅಶ್ವತ್ ತಗೊಂಡಿದ್ದ ವ್ಯಕ್ತಿ ಒಬ್ಬನನ್ನು ಸ್ಥಳೀಯರು ಆಸ್ಪತ್ರೆಗೆ ಕೊಂಡಯುವಾಗ ಮಾರ್ಗ ಮಧ್ಯೆ ಆತ ಮೃತಪಟ್ಟಿದ್ದಾನೆ. ಚಿನ್ನಸ್ವಾಮಿ ಕ್ರೀಡಾಂಗಣ ಹಾಗೂ ವಿಧಾನಸೌಧ ಮುಂಭಾಗ 2ನೇ ಪುಟಕ್ಕೆ

# ಸಮಾನತೆ ಮತ್ತು ಶೋಷಣೆ ಮುಕ್ತ ಸಮಾಜಕ್ಕಾಗಿ ಯುವಜನತೆ ಹೋರಾಡಲಿ: ಚೇತನ್ ಅಹಿಂಸಾ ಕರೆ

**ಯುವ ಮಾರ್ಗ ಸುದ್ದಿ**

**ಮಾನ್ವಿ,ಜೂ.4–** ಸಮಾಜದಲ್ಲಿ ಸಮಾನತೆ ಮತ್ತು ಶೋಷಣೆ ಮುಕ್ತ ವಾತಾವರಣವನ್ನು ನಿರ್ಮಿಸಲು ಯುವ ಸಮುದಾಯ ಮುಂದೆ ಬರಬೇಕು ಎಂದು ಚಲನಚಿತ್ರ ನಟ ಹಾಗೂ ಸಾಮಾಜಿಕ ಹೋರಾಟಗಾರ ಚೇತನ್ ಅಹಿಂಸಾ ಕರೆ ನೀಡಿದ್ದಾರೆ. ಮಾನ್ವಿಯ ಧ್ಯಾನ ಮಂದಿರದಲ್ಲಿ ಹೈದರಾಬಾದ್ ಕರ್ನಾಟಕ ವಿದ್ಯಾರ್ಥಿ ಒಕ್ಕೂಟ ಹಾಗೂ ಸಮಾನ ಮನಸ್ಕರ ವೇದಿಕೆ ವತಿಯಿಂದ ಆಯೋಜಿಸಿದ್ದ ಪ್ರತಿಭಾ ಪುರಸ್ಕಾರ ಮತ್ತು ಸಾಧಕರಿಗೆ ಸನ್ಮಾನ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಡಾ.ಬಿ.ಆರ್. ಅಂಬೇಡ್ಕರ್ ಅವರು ಉನ್ನತ ಶಿಕ್ಷಣದ ಮೂ



ಲಕ ಜ್ಞಾನವನ್ನು ಪಡೆದು ಸಂವಿಧಾನವನ್ನು ದೇಶಕ್ಕೆ ನೀಡಿ, ದೇಶದ ಅಭಿವೃದ್ಧಿಗೆ ಕಾರಣರಾದರು ಎಂದು ಚೇತನ್ ಅಹಿಂಸಾ ಸ್ಮರಿಸಿದರು. ಪಠ್ಯಪುಸ್ತಕಗಳ ಜೊತೆಗೆ ವಿದ್ಯಾರ್ಥಿಗಳು ನಮ್ಮ ನಿಜವಾದ ಇತಿಹಾಸವನ್ನು ತಿಳಿದುಕೊಳ್ಳಲು ಡಾ.ಬಿ.ಆರ್. ಅಂಬೇಡ್ಕರ್ ಮತ್ತು ಬಸವಣ್ಣನವರ ಕೃತಿಗಳು ಹಾಗೂ ವಚನಗಳನ್ನು ಅಧ್ಯಯನ ಮಾಡಬೇಕು. ಆಗ ಮಾತ್ರ ಶೋಷಣೆ ಮುಕ್ತ ಸಮ ಸಮಾಜವನ್ನು ಕಟ್ಟಲು ಸಾಧ್ಯ ಎಂದು ಅವರು ಪ್ರತಿಪಾದಿಸಿದರು.

ಯುವ ಸಮುದಾಯವು ಜನರಲ್ಲಿ ಜಾಗೃತಿ ಮೂಡಿಸುವ ಕಾರ್ಯಗಳನ್ನು ಮಾಡಬೇಕು. ಹೋರಾಟಗಳು, ಸಮಾಜ ಸೇವೆ ಮತ್ತು ಚಳುವಳಿಗಳ ಮೂಲಕ ಮಾತ್ರ ಜನರಿಗೆ ಹತ್ತಿರವಾಗಲು ಸಾಧ್ಯ. ಸಮಾಜದಲ್ಲಿನ ಹಲವು ಸಮಸ್ಯೆಗಳಿಗೆ ರಚನಾತ್ಮಕ ಹೋರಾಟದ ಮೂಲಕ ಪರಿಹಾರ ಕಂಡುಕೊಳ್ಳಲು ಪ್ರತಿಯೊಬ್ಬರೂ ಮುಂದಾಗಬೇಕು ಎಂದು ಚೇತನ್ ಅಹಿಂಸಾ ಕರೆ ನೀಡಿದರು.

ಹಿರಿಯ ದಲಿತ ಮುಖಂಡರಾದ ಬಾಲಸ್ವಾಮಿ ಕೊಡ್ಲಿ ಮಾತನಾಡಿ, ಯುವ ಸಮುದಾಯವು ಡಾ.ಬಿ.ಆರ್. ಅಂಬೇಡ್ಕರ್ ಮತ್ತು ಬಸವಣ್ಣನವರ ಚಿಂತನೆಗಳನ್ನು ಅಳವಡಿಸಿಕೊಂಡು ಸಮ ಸಮಾಜ ನಿರ್ಮಾಣಕ್ಕೆ ಮುಂದಾಗಬೇಕಾಗಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ತಾಲೂಕಿನಲ್ಲಿ ಎಸ್.ಎಸ್.ಎಲ್.ಸಿ. ಮತ್ತು ಪಿ.ಯು.ಸಿ. ವಾರ್ಷಿಕ ಪರೀಕ್ಷೆಗಳಲ್ಲಿ ಅತಿ ಹೆಚ್ಚು ಅಂಕಗಳನ್ನು ಪಡೆದ ವಿದ್ಯಾರ್ಥಿಗಳನ್ನು ಹಾಗೂ ವಿವಿಧ ಕ್ಷೇತ್ರಗಳಲ್ಲಿ ಉತ್ತಮ ಸಾಧನೆ ತೋರಿದ ಸಾಧಕರನ್ನು ಸನ್ಮಾನಿಸಿ ಗೌರವಿಸಲಾಯಿತು.

ಈ ಸಂದರ್ಭದಲ್ಲಿ ಮಾಜಿ ಶಾಸಕ 2ನೇ ಪುಟಕ್ಕೆ

# ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತಿ ಆಚರಣೆ



**ಯುವ ಮಾರ್ಗ ಸುದ್ದಿ**

**ದೇವದುರ್ಗ,ಜೂ.4–** ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ವತಿಯಿಂದ ಮೈಸೂರು ಮಹಾರಾಜ ಶ್ರೀನಾಲ್ವಡಿ ಕೃಷ್ಣರಾಜ ಒಡೆಯರ್ ಅವರ 141ನೇ ಜಯಂತಿಯನ್ನು ಸಾರ್ವಜನಿಕ ಕ್ಲಬ್ ವೇದಿಕೆ ಆವರಣದಲ್ಲಿ ಆಚರಿಸಲಾಯಿತು.

ಕಾರ್ಯಕ್ರಮದಲ್ಲಿ ವಿಶೇಷ ಆಮಂತ್ರಿಕರಾಗಿ ಆಗಮಿಸಿದ ರಾಯಚೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಎ. ರಂಗಣ್ಣ ಪಾಟೀಲ್ ಅವರು ಒಡೆಯರ್ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿ ಪೂಜೆ ಸಲ್ಲಿಸಿದರು. ನಂತರ ಮಾತನಾಡಿದ ಅವರು, "ಕನ್ನಡ ನಾಡು-ನುಡಿ-ಭಾಷೆಗೆ ನಾಲ್ವಡಿ ಕೃಷ್ಣರಾಜ ಒಡೆಯರ್ ಮರೆಯಲಾಗದ ಕೊಡುಗೆಗಳನ್ನು ನೀಡಿದ್ದಾರೆ. 1915ರಲ್ಲಿ ಕನ್ನಡ ಸಾಹಿತ್ಯ ಪರಿಷತ್ ಸ್ಥಾಪಿಸಿ, ಕನ್ನಡಿಗರಲ್ಲಿ ಭಾಷಾಭಿಮಾನ ಮತ್ತು ಕನ್ನಡದ ಅಸ್ಮಿತೆ ಬೆಳೆಯಲು ಈ ಸಂಸ್ಥೆ ಪ್ರೇರಣೆಯಾಗಿದೆ. ಸಾಮಾಜಿಕ ನ್ಯಾಯದಲ್ಲಿ ನಂಬಿಕೆ ಇಟ್ಟಿದ್ದ ಒಡೆಯರ್, 1918ರಲ್ಲಿ ಹಿಂದುಳಿದ ವರ್ಗಗಳ ಆಯೋಗ ರಚಿಸಿ, ವೆಸ್ಲಿ ಮಿಲ್ಲರ್ ಅವರನ್ನು ನೇಮಿಸಿ, ಹಿಂದುಳಿದ ವರ್ಗಗಳಿಗೆ ಮೀಸಲಾತಿ ಸೌಕರ್ಯ ಕಲ್ಪಿಸಿದ ಕೀರ್ತಿ ಅವರಿಗೆ ಸಲ್ಲುತ್ತದೆ. ಸಾಹಿತ್ಯ, ಸಂಗೀತ, ಚಿತ್ರಕಲೆ, ಕ್ರೀಡೆಗಳಿಗೆ ಅಪಾರ 2ನೇ ಪುಟಕ್ಕೆ

# ಬೆಂಬಲ ಬೆಲೆ ಅಡಿಯಲ್ಲಿ ಜೋಳ ಖರೀದಿಗೆ ಜೆಡಿಎಸ್ ಪ್ರತಿಭಟನೆ



**ಯುವ ಮಾರ್ಗ ಸುದ್ದಿ**

**ಮಾನ್ವಿ,ಜೂ.4–** ಬೆಂಬಲ ಬೆಲೆ ಯೋಜನೆಯಡಿ ಜೋಳ ಖರೀದಿಯಲ್ಲಿ ಸರ್ಕಾರ ವಿಳಂಬ ನೀತಿ ಅನುಸರಿಸುತ್ತಿದೆ ಎಂದು ಆರೋಪಿಸಿ ಮಾನ್ವಿ ಮತ್ತು ಸಿರವಾರ ತಾಲೂಕು ಜೆಡಿಎಸ್ ಘಟಕದ ವತಿಯಿಂದ ಮಾಜಿ ಶಾಸಕ ರಾಜಾ ವೆಂಕಟಪ್ಪ ನಾಯಕ ನೇತೃತ್ವದಲ್ಲಿ ಬುಧವಾರ ಪಟ್ಟಣದಲ್ಲಿ ಪ್ರತಿಭಟನೆ ನಡೆಸಲಾಯಿತು. ನಂತರ ತಹಸೀಲ್ದಾರ್ ಕಚೇರಿ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಲಾಯಿತು.

ಪಟ್ಟಣದ ಬಸವ ವೃತ್ತದಲ್ಲಿ ಜಮಾಯಿಸಿದ ನೂರಾರು ಜೆಡಿಎಸ್ ಕಾರ್ಯಕರ್ತರು ಮತ್ತು ರೈತರು, ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗುತ್ತಾ ಪ್ರತಿಭಟನೆ ನಡೆಸಿದರು. ನಂತರ ಪ್ರತಿಭಟನಾ ಮೆರವಣಿಗೆ ಮೂಲಕ ತಹಸೀಲ್ದಾರ್ ಕಚೇರಿಗೆ ತೆರಳಿ ಗ್ರೇಡ್-2 ತಹಸೀಲ್ದಾರ್ ಅಬ್ದುಲ್ ವಾಹಿದ್ ಅವರಿಗೆ ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಮಾಜಿ ಶಾಸಕ ರಾಜಾ ವೆಂಕಟಪ್ಪ ನಾಯಕ, "ಮಾನ್ವಿ ಮತ್ತು ಸಿರವಾರ ತಾಲೂಕುಗಳ ರೈತರು 2024ರ ಮುಂಗಾರು ಹಂಗಾಮಿನಲ್ಲಿ 6.30 ಲಕ್ಷ ಕ್ವಿಂಟಾಲ್ ಜೋಳ ಮಾರಾಟಕ್ಕೆ ನೋಂದಾಯಿಸಿದ್ದರು. ಆದರೆ, ಖರೀದಿ ಕೇಂದ್ರಗಳ ಮೂಲಕ ಕೇವಲ 36 ಲಕ್ಷ ಕ್ವಿಂಟಾಲ್ ಮಾತ್ರ ಖರೀದಿ ಮಾಡಲಾಗಿದ್ದು, 5.93 ಲಕ್ಷ ಕ್ವಿಂಟಾಲ್ ಖರೀದಿ ಬಾಕಿ ಉಳಿದಿದೆ. ಅಂತೆಯೇ 2024-25ನೇ ಸಾಲಿನ ಹಿಂಗಾರಿನಲ್ಲಿ 87 ಲಕ್ಷ ಕ್ವಿಂಟಾಲ್ ನೋಂದಣಿಯಾಗಿದ್ದು, 1.63 ಲಕ್ಷ ಕ್ವಿಂಟಾಲ್ ಖರೀದಿ ಬಾಕಿ ಉಳಿದಿದೆ. ಇದರಿಂದ ಜೋಳ ಬೆಳೆದ ರೈತರು ತೀವ್ರ ಸಂಕಷ್ಟ ಎದುರಿಸುತ್ತಿದ್ದಾರೆ" ಎಂದು ಆತಂಕ ವ್ಯಕ್ತಪಡಿಸಿದರು.

ಕೂಡಲೇ ಬೆಂಬಲ ಬೆಲೆಯಡಿ ಜೋಳ ಖರೀದಿಗೆ ಚಾಲನೆ ನೀಡಬೇಕು ಎಂದು ಒತ್ತಾಯಿಸಿದ ಅವರು, ಮುಂದಿನ ದಿನಗಳಲ್ಲಿ ಮುಂಚಿತವಾಗಿಯೇ ಖರೀದಿ ಕೇಂದ್ರಗಳನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು. ಅಲ್ಲದೆ, ಜೋಳ ಖರೀದಿ ವಿಳಂಬವಾಗುತ್ತಿರುವುದರಿಂದ



ಮಾನ್ವಿ; ಪಟ್ಟಣದ ಬಸವ ವೃತ್ತ ಬಳಿ ಜೋಳ ಖರೀದಿ ಆರಂಭಿಸುವಂತೆ ಮಾಜಿ ಶಾಸಕ ಹಾಗೂ ಕಾರ್ಯಕರ್ತರು ರಸ್ತೆ ಮೇಲೆ ಮಲಗಿ ಪ್ರತಿಭಟಿಸಿದರು.

ಬ್ಯಾಂಕ್‌ನವರು ರೈತರಿಂದ ಸಾಲ ವಸೂಲಾತಿಗೆ ನೋಟಿಸ್ ನೀಡದಂತೆ ನಿರ್ದೇಶನ ನೀಡಬೇಕು ಮತ್ತು ಡಾ. ಸ್ವಾಮಿನಾಥನ್ ವರದಿಯ ಆಧಾರದಲ್ಲಿ ರೈತರು ಬೆಳೆದ ಬೆಳೆಗಳಿಗೆ ವೈಜ್ಞಾನಿಕವಾಗಿ ಬೆಲೆ ನಿಗದಿಪಡಿಸಬೇಕು ಎಂದು ಒತ್ತಾಯಿಸಿದರು.

ಈ ಪ್ರತಿಭಟನೆಯಲ್ಲಿ ಮಾನ್ವಿ ತಾಲೂಕು ಜೆಡಿಎಸ್ ಅಧ್ಯಕ್ಷ ಈರಣ್ಣ ಮರ್ಲಟ್ಟಿ ಪೋತ್ನಾಳ್, ಸಿರವಾರ ಜೆಡಿಎಸ್ ಅಧ್ಯಕ್ಷ ಟಿ. ಮಲ್ಲಿಕಾರ್ಜುನ ಪಾಟೀಲ್, ಮುಖಂಡ ಪಿ. ರವಿಕುಮಾರ್ ಸೇರಿದಂತೆ ನೂರಾರು ಜೆಡಿಎಸ್ ಕಾರ್ಯಕರ್ತರು ಪಾಲ್ಗೊಂಡಿದ್ದರು.

# ಬಕ್ರಿದ್ ಹಬ್ಬದ ಅಂಗವಾಗಿ ಶಾಂತಿ ಸಭೆ



**ಯುವ ಮಾರ್ಗ ಸುದ್ದಿ**

**ಮಾನ್ವಿ,ಜೂ.4–** ಪಟ್ಟಣದ ಪೊಲೀಸ್ ಠಾಣೆಯಲ್ಲಿ ಬಕ್ರಿದ್ ಹಬ್ಬದ ಅಂಗವಾಗಿ ನಡೆದ ಶಾಂತಿ ಸಭೆಯಲ್ಲಿ ಪಿ.ಐ.ಸೋಮಶೇಖರ ಎಸ್.ಕೆಂಚರೆಡ್ಡಿ ಮಾತನಾಡಿ ಜೂ.7 ರಂದು ಮುಸ್ಲಿಂ ಸಮುದಾಯವರು ಪವಿತ್ರವಾದ ತ್ಯಾಗಬಲಿದಾನದ ಸಂಕೇತವಾಗಿರುವ ಬಕ್ರಿದ ಹಬ್ಬವನ್ನು ಆಚರಿಸುವುದರಿಂದ ಪೊಲೀಸ್ ಇಲಾಖೆಯಿಂದ ಅಗತ್ಯ ಬಂದೋಬಸ್ತ ಕಲ್ಪಿಸಲಾಗುವುದು. ಈ ವೇಳೆಯಲ್ಲಿ ಹಿಂದೂ ಮತ್ತು ಮುಸ್ಲಿಂ ಸಮುದಾಯದವರು ಪರಸ್ಪರ ಸಹಕಾರದಿಂದ ಶಾಂತಿ ಸೌಹಾರ್ದತೆಯಿಂದ ಹಬ್ಬವನ್ನು ಆಚರಿಸಬೇಕು. ಯುವ ಸಮುದಾಯ ಸಾಮಾಜಿಕ ಜಾಲತಾಣಗಳಲ್ಲಿ ಬರುವ ಯಾವುದೇ ಸಂದೇಶಗಳಿಗೆ ಪ್ರಭಾವಿತರಾಗಿ ಪ್ರಚೋದನೆಗೆ ಒಳಗಾಗದಂತೆ ಹಾಗೂ ದುಷ್ಚಟಗಳಿಗೆ ಬಲಿಯಾಗದಂತೆ ,ಮಾದಕ ಪದಾರ್ಥಗಳ 2ನೇ ಪುಟಕ್ಕೆ

# ಅಂಗನವಾಡಿ ಪಕ್ಕದಲ್ಲೇ ಚರಂಡಿ ನೀರು : ರೋಗದ ಭೀತಿ

**ಯುವ ಮಾರ್ಗ ಸುದ್ದಿ**

**ಲಿಂಗಸುಗೂರು :** ಪುರಸಭೆ ವ್ಯಾಪ್ತಿಯ 5ನೇ ವಾರ್ಡನಲ್ಲಿ ಬರುವ ಅಂಗನವಾಡಿ ಸಮೀಪದಲ್ಲಿ ಮನೆಗಳಿಂದ ಹೊರಡುವ ಕೊಳಚೆ ನೀರು ಸಂಗ್ರಹವಾಗುತ್ತಿದ್ದು, ಸೊಳ್ಳೆಗಳ ಉತ್ಪತ್ತಿಯ ತಾಣವಾಗಿ ಪರಿಣಮಿಸಿರುವ ಪರಿಣಾಮ ಪುಟ್ಟ ಮಕ್ಕಳಿಗೆ ರೋಗ- ರುಜಿನಗಳು ಹರಡುವ ಭೀತಿಯಲ್ಲಿ ಮಕ್ಕಳು ಸಂಕಷ್ಟದಲ್ಲಿ ಸಿಲುಕಿದ್ದಾರೆ. ಅಂಗನವಾಡಿ ಕೇಂದ್ರದ ಸುತ್ತ ನೀರು ಸಂಗ್ರಹವಾಗಿ ಸಮಸ್ಯೆ ಉಂಟಾಗುತ್ತದೆ. ಅಂಗನ ವಾಡಿಗೆ ಬರುವ ಮಕ್ಕಳು, ಗರ್ಭಿಣಿಯರು ದುರ್ವಾಸನೆ ನಡುವೆ ಬರಬೇಕಾದ ಸನ್ನಿವೇಶ ಏರ್ಪಟ್ಟಿದೆ. ಬಾಣಂತಿಯ ರು, ಗರ್ಭಿಣಿಯರು, ಪುಟ್ಟಮ ಕ್ಕಳೇ ಹೆಚ್ಚಾಗಿ ಇಲ್ಲಿ ಓಡಾಡುವು ದರಿ



ಂದ ಆರೋಗ್ಯದ ಮೇಲೆ ವ್ಯತಿ ರಿಕ್ತ ಪರಿಣಾಮ ಬೀರಬಹುದು ಎಂಬ ಆತಂಕ ಮನೆಮಾ ಡಿದೆ.ಅಂಗನವಾಡಿ ಸುತ್ತ ಇರುವ ಮನೆಗಳ ಕೊಳಚೆ ನೀರು ಸರಿಯಾಗಿ ಹರಿಯಲು ಚರಂಡಿಯ ವ್ಯವಸ್ಥೆ ಮಾಡಿಲ್ಲ. ಪಕ್ಕದಲ್ಲಿ ಹಾದು ಹೋಗಿರುವ ರಸ್ತೆ ಕೂಡ ಇಲ್ಲ, ಈ ಸಮಸ್ಯೆಯನ್ನು ಪರಿಹರಿಸಿ ಎಂದು ಪುರಸಭೆ ಆಡಳಿತ ಮಂಡಳಿಗೆ ತಿಳಿಸಿದ್ದರೂ ಇತ್ತ ಗಮನ ಹರಿಸಿಲ್ಲ ಎಂದು ಇಲ್ಲಿನ ನಿವಾಸಿಗಳು ದೂರಿ ದ್ದಾರೆ.ಈ ಪ್ರದೇಶದಲ್ಲಿ ವಾಸ ಮಾಡುವ ಅನೇಕ ಕುಟು ಂಬಗಳು ಕೂಲಿ ಕಾರ್ಮಿಕರು ಹಾಗೂ ಬಡವರಿದ್ದು, ಇವರುಗಳಲ್ಲಿ ಅನೇಕ ಮನೆಗಳಿಗೆ ಶೌಚಾಲಯವೇ

**ಪುರಸಭೆ ವ್ಯಾಪ್ತಿಯಲ್ಲಿ ಬರುವ 5ನೇ ವಾರ್ಡನಲ್ಲಿ ಈಗಾಗಲೇ ಸಿಬ್ಬಂದಿಗಳು ಕಾರ್ಯನಿರ್ವಹಿತ್ತಿದ್ದು ಕೂಡಲೇ ಅಂಗನವಾಡಿ ಪಕ್ಕದಲ್ಲಿ ಇರುವ ಚರಂಡಿ ನೀರನ್ನು ಸ್ವಚ್ಚಗೊಳಿಸಲಾಗುವುದು.**
**– ಶಹನವಾಜ್ ಪುರಸಭೆ ನೈರ್ಮಲ್ಯ ಅಧಿಕಾರಿ**

ಇಲ್ಲ. ಕೆಲವು ಮನೆಗಳು ಶಿಥಿಲಗೊಂಡಿದ್ದು, ಸರ್ಕಾರಿ ವಸತಿ ಯೋಜನೆಯಿಂದಲೂ ವಂಚಿತರಾಗಿದ್ದಾರೆ. ಕೆಲವರು ದನಕರುಗಳನ್ನು ಸಾಕಿದ್ದಾರೆ. ಸೂಕ್ತ ಚರಂಡಿ ವ್ಯವಸ್ಥೆಯಿಲ್ಲದೆ ಅನೇಕ ಮನೆಗಳ ಕಲುಷಿತ ನೀರು, ತಗ್ಗು ಪ್ರದೇಶದಲ್ಲಿರುವ ಮನೆಗಳ ಅಂಗಳದಲ್ಲೇ ಹರಿಯುತ್ತಿದೆ. ಮಳೆ ಸುರಿದರೆ ಮಳೆಯ ನೀರಿನೊಂದಿಗೆ ಕಲುಷಿತ ನೀರು ಸೇರಿ ಮನೆಯ ಸುತ್ತ ಮುತ್ತ ನೀರು ಸಂಗ್ರಹವಾಗಿ ದುರ್ವಾಸನೆ ಬೀರುತ್ತದೆ. ಕೂಡಲೇ ಚರಂಡಿ ವ್ಯವಸ್ಥೆ ಮತ್ತು ರಸ್ತೆ ಡಾಂಬರೀಕರಣ ಮಾಡಬೇಕು ಎಂದು ಅಲ್ಲಿನ ನಿವಾಸಿಗಳು ಒತ್ತಾಯಿಸಿದ್ದಾರೆ. ಸಂಬಂಧಪಟ್ಟ ಪು ರಸಭೆ ಅಧಿಕಾರಿಗಳಿಗೆ ಕೂಡಲೇ ಚರಂಡಿ ಹಾಗೂ ರಸ್ತೆ ಸೌಲಭ್ಯವನ್ನು ಕಲ್ಪಿಸಬೇಕು ಎಂದು ಅಲ್ಲಿನ ನಿವಾಸಿಗಳು ಆಗ್ರಹಿಸಿದ್ದಾರೆ. ಇಲ್ಲಿನ ಪರಿಸರದಲ್ಲಿ ವಾಸ ಮಾಡಲು ಸಾಧ್ಯವಾಗು ತ್ತಿಲ್ಲ. ತ್ಯಾಜ್ಯ ನೀರು ಸಂಗ್ರ ಹವಾಗಿ ಪರಿಸರವೇ ದುರ್ವಾಸನೆಯಿಂದ ಕೂಡಿದೆ. ಚರಂಡಿ ವ್ಯವಸ್ಥೆ ಕಲ್ಪಿಸಿ, ಮೂಲಭೂತ ಸೌಕ ರ್ಯಗಳನ್ನು ಒದಗಿಸುವಂತೆ ಸಾಕಷ್ಟು ಸಲ ಮನವಿ ಸಲ್ಲಿಸಿದ್ದರೂ ಈ ವರೆಗೂ ಕ್ರಮಕ್ಕೆ ಮುಂದಾಗಿಲ್ಲ ಎಂದು ಸ್ಥಳೀಯ ನಿವಾಸಿ ಖಾಸಿಂಬಿ ಆರೋಪಿಸಿದ್ದಾರೆ.

ಯುವ ಮಾರ್ಗ

ಗುರುವಾರ : 05-06-2025

## ಮೊದಲನೇಯ ಪುಟದಿಂದ

# ಅರ್‌ಸಿಬಿ ಸಂಭ್ರಮಾಚರಣೆ ವೇಳೆ ದುರಂತ

ಜನಸಾಗರವೇ ತುಂಬಿ ಬಂದಿದ್ದು ಮಕ್ಕಳು ಮಹಿಳೆಯರು ಯುವಕರು ಯುವತಿಯರು ಕೊಹ್ಲಿ ಹಾಗೂ ತಮ್ಮ ನೆಚ್ಚಿನ ಆಟಗಾರರನ್ನು ನೋಡಲು ಕಾತರದಿಂದ ಕಾದಿದ್ದರು. ಚಿನ್ನಸ್ವಾಮಿ ಕ್ರೀಡಾಂಗಣ ಹಾಗೂ ವಿಧಾನಸೌಧ ಮುಂಭಾಗ ಜನಸಾಗರವೇ ತುಂಬಿ ಬಂದಿದ್ದು ಮಕ್ಕಳು ಮಹಿಳೆಯರು ಯುವಕರು ಯುವತಿಯರು ಕೊಹ್ಲಿ ಹಾಗೂ ತಮ್ಮ ನೆಚ್ಚಿನ ಆಟಗಾರರನ್ನು ನೋಡಲು ಕಾತರದಿಂದ ಕಾದಿದ್ದರು. ನಿರೀಕ್ಷೆಗೂ ಮೀರಿದ ಜನ ಸಮೂಹ ಬಂದಿದ್ದರಿಂದ ಈ ಎಡವಟ್ಟು ಸಂಭವಿಸಿದೆ.

**ಮೃತರ ಕುಟುಂಬಗಳಿಗೆ ತಲಾ 10 ಲಕ್ಷ ರೂ. ಪರಿಹಾರ ಘೋಷಿಸಿದ ಸಿಎಂ**

ಬೆಂಗಳೂರು : ಆರ್‌ಸಿಬಿ ಸಂಭ್ರಮಾಚರಣೆ ವೇಳೆ ಕಾಲ್ತುಳಿದದ ಕುರಿತು ಸಿಎಂ ಸಿದ್ದರಾಮಯ್ಯ ಸುದ್ದಿಗೋಷ್ಠಿ ನಡೆಸಿದರು. ಈ ವೇಳೆ ಮಾತನಾಡಿದ ಅವರು ಇಷ್ಟೊಂದು ಅಭಿಮಾನಿಗಳು ಸೇರುತ್ತಾರೆ ಎಂದು ಯಾರೂ ಊಹೆ ಮಾಡಿರಲಿಲ್ಲ. ಒಂದು ಲಕ್ಷಕ್ಕೂ ಹೆಚ್ಚು ಅಭಿಮಾನಿಗಳು ಸೇರಿದ್ದರಿಂದ ನೂಕುನುಗ್ಗಲಾಗಿ ಕಾಲ್ತುಳಿತ ಸಂಭವಿಸಿದೆ. ಘಟನೆಯಲ್ಲಿ 11 ಮಂದಿ ಸಾವನ್ನಪ್ಪಿದ್ದು ಎಲ್ಲರೂ ಯುವಕ-ಯುವತಿಯರಾಗಿದ್ದಾರೆ. 35ಕ್ಕೂ ಹೆಚ್ಚು ಮಂದಿಗೆ ಗಾಯಗಳಾಗಿವೆ. ಮೃತರ ಕುಟುರ್ಂಬಕ್ಕೆ ತಲಾ 10 ಲಕ್ಷ ಪರಿಹಾರ ನೀಡುವುದಾಗಿ ಘೋಷಣೆ ಮಾಡಿದರು. ಘಟನೆ ಕುರಿತು ಮ್ಯಾಜಿಸ್ಟ್ರೇಟ್ ತನಿಖೆ ನಡೆಸುವುದಾಗಿ ತಿಳಿಸಿದ ಸಿಎಂ ಸಿದ್ದರಾಮಯ್ಯ, ತಪ್ಪಿದಸ್ಥರ ವಿರುದ್ಧ ಕ್ರಮ ಕೈಗೊಳ್ಳುವುದಾಗಿ ಹೇಳಿದರು. ಅನಿರೀಕ್ಷಿತವಾಗಿ ಜನ ಸೇರಿದ್ದರಿಂದ ಈ ದುರಂತ ಸಂಭವಿಸಿದೆ ಎಂದು ಅವರು ಹೇಳಿದರು.

**ಗಾಯಾಳುಗಳನ್ನ ಭೇಟಿಯಾದ ನಿಖಿಲ್**

ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿನ ಐಪಿಎಲ್ ಸಂಭ್ರಮಾಚರಣೆಯ ವೇಳೆ ಕಾಲ್ತುಳಿತಕ್ಕೆ ಸಿಲುಕಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಗಾಯಾಳುಗಳನ್ನ ನಿಖಿಲ್ ಕುಮಾರಸ್ವಾಮಿ ಅವರು ಬೌರಿಂಗ್ ಆಸ್ಪತ್ರೆಗೆ ತೆರಳಿ ಕ್ಷೇಮ ವಿಚಾರಿಸಿ, ಸಾಂತ್ವನ ಹೇಳಿದರು.

**ಬೌರಿಂಗ್ ಅಸ್ಪತ್ರೆಗೆ ವಿಜಯೇಂದ್ರ ಭೇಟಿ :**

ಆರ್‌ಸಿಬಿ ಸಂಭ್ರಮಾಚರಣೆ ವೇಳೆ ಗಾಯಗೊಂಡು ಬೌರಿಂಗ್ ಆಸ್ಪತ್ರೆಯಲ್ಲಿ ಚಿಕಿತ್ಸೆಗಾಗಿ ದಾಖಲಾಗಿರುವವರನ್ನು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಭೇಟಿಯಾಗಿ ಸಾಂತ್ವನ ಹೇಳಿದರು. ಘಟನೆಯಲ್ಲಿ 27ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದು, ವಿವಿಧ ಆಸ್ಪತ್ರೆಗೆ ದಾಖಲಿಸಲಾಗಿದೆ.

# ಸಮಾನತೆ ಮತ್ತು ಶೋಷಣೆ ಮುಕ್ತ ಸಮಾಜಕ್ಕಾಗಿ ಯುವಜನತೆ ಹೋರಾಡಲಿ: ಚೇತನ್ ಅಹಿಂಸಾ ಕರೆ

ರಾಜಾ ವೆಂಕಟಪ್ಪನಾಯಕ, ಹೈದರಾಬಾದ್ ಕರ್ನಾಟಕ ವಿದ್ಯಾರ್ಥಿ ಒಕ್ಕೂಟದ ರಾಜ್ಯಾಧ್ಯಕ್ಷರಾದ ಮಲ್ಲೇಶ ಮಾಚನೂರು ವಕೀಲರು, ರವಿಪಾಟೀಲ್ ಫೌಂಡೇಶನ್ ಅಧ್ಯಕ್ಷರಾದ ರವಿಪಾಟೀಲ್, ಮನೋಜ್ ಕುಮಾರ ಮಿಶ್ರ, ಅಂಬೇಡ್ಕರ್ ಸೇವಾ ಸಮಿತಿಯ ರಾಜ್ಯಾಧ್ಯಕ್ಷರಾದ ಕೆ.ಎಂ. ಸಂದೇಶ, ಹನುಮೇಶ ಮದ್ಲಾಪುರ್, ತಾ.ಅ.ಭಾ.ವಿ.ಲಿಂ. ಮಹಾಸಭಾ ಅಧ್ಯಕ್ಷರಾದ ಅರುಣಚಂದಾ, ಡಾ.ಅಂಬಿಕಾ ಮಧುಸೂದನ್, ಚಿನ್ನಮ್ಮ, ಹನುಮಂತ ಸಾದಪೂರ್, ನರಸಪ್ಪ ಜೂಕೂರ್, ಹನುಮಂತಕೋಟೆ, ಆಂಜನೇಯ್ಯನಸ್ಲಪುರ್, ತಾ. ಸಂಚಾಲಕರಾದ ಯಲ್ಲಪ್ಪ ಬಾದರದಿನ್ನಿ, ಹನಮಂತ ಬ್ಯಾಗವಾಟ್, ಹನುಮೇಶ ಜೇನೂರು, ದತ್ತಾತ್ರೇಯ, ಬಸವರಾಜ ವಕೀಲರು, ನವೀನ್ ಕುರ್ಡಿ, ಶಿವಕುಮಾರ ಮ್ಯಾಗಳಮನಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ಬಕ್ರಿದ್ ಹಬ್ಬದ ಅಂಗವಾಗಿ ಶಾಂತಿ ಸಭೆ

ಸೇವೆನೆಯ ಚಟಕ್ಕೆ ಬಿಳದಂತೆ ಎರಡು ಸಮುದಾಯಗಳ ಹಿರಿಯರು ತಿಳಿವಳಿಕೆ ನೀಡಬೇಕು ಪಟ್ಟಣದಲ್ಲಿ ಕಳ್ಳತನ ,ಅಹಿತಕರ ಘಟನೆಗಳು ನಡೆಯದಂತೆ ಮನೆಯ ಹೋರಗಡೆ ಸಿ.ಸಿ.ಟಿವಿ ಅಳವಡಿಸಿಕೊಳ್ಳಿ.ಅತ್ಯವಸರ ಸಮಯದಲ್ಲಿ 112 ಸಹಾಯವಾಣಿಗೆ ಕರೆ ಮಾಡಿ ಪೊಲೀಸ್ ಇಲಾಖೆಯ ನೆರವನ್ನು ಪಡುದುಕೊಳ್ಳಬಹುದು ಎಂದು ತಿಳಿಸಿದರು.

ಶಾಂತಿ ಸಭೆಯಲ್ಲಿ ಮುಸ್ಲಿಂ ಧರ್ಮದ ಧರ್ಮಗುರುಗಳಾದ ಸೈಯಾದ್ ಸಜ್ಜಾದ್ ಹುಸೇನ್, ಮತ್ವಾಲೆ ಸಾಹೇಬ್,ಎ.ಬಿ.ಉಪಳಮಠ ವಕೀಲರು, ರಾಜಾ ಸುಭಾಷ್ಚಂದ್ರ ನಾಯಕ, ಜಾವೀದ್ ಖಾನ್, ಸೈಯಾದ್ ಆರೀಫ್, ಪುರಸಭೆ ಸದಸ್ಯರಾದ ರೇವಣಸಿದ್ದಯ್ಯಸ್ವಾಮಿ, ಹೆಚ್.ಬಿ.ಎಂ.ಬಾಷಾ, ಹನುಮಂತ ಕೋಟೆ,ರಾಮಣ್ಣ ನಾಯಕ ಸೇರಿದಂತೆ ಇನ್ನಿತರರು ಇದ್ದರು.

# ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತಿ ಆಚರಣೆ

ಪ್ರೋತ್ಸಾಹ ನೀಡಿದ ಒಡೆಯರ್ ಅವರ ಸೇವೆ ಕನ್ನಡಿಗರು ಎಂದಿಗೂ ಮರೆಯುವುದಿಲ್ಲ" ಎಂದು ಅಭಿಪ್ರಾಯಪಟ್ಟರು. ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಎಚ್. ಶಿವರಾಜ್ ಮಾತನಾಡಿ, "ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಶಿವನಸಮುದ್ರ ಜಲ ವಿದ್ಯುತ್ ಸ್ಥಾವರ, ಮೈಸೂರು ಬ್ಯಾಂಕ್, ಮೈಸೂರು ವಿಶ್ವವಿದ್ಯಾಲಯ, ಮೈಸೂರಿನಲ್ಲಿ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ, ಅರಗು ಮತ್ತು ಕಾಗದದ ಕಾರ್ಖಾನೆಗಳನ್ನು ಸ್ಥಾಪಿಸಿದರು. ಅಲ್ಲದೆ, ವೇಶ್ಯಾವೃತ್ತಿ, ದೇವದಾಸಿ ಪದ್ಧತಿ, ವನ್ಯಪ್ರಾಣಿಗಳ ಬೇಟೆ ನಿಷೇಧಕ್ಕೆ ಕಾನೂನು ಅನುಷ್ಠಾನಗೊಳಿಸಿದರು. ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಕ್ಷೇತ್ರಗಳಲ್ಲಿ ಮತ್ತು ಕನ್ನಂಬಾಡಿ ಅಣೆಕಟ್ಟು ನಿರ್ಮಾಣದ ಮೂಲಕ ನಮ್ಮ ನಾಡಿಗೆ ಮೈಸೂರು ಸಂಸ್ಥಾನದ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಕೊಡುಗೆ ಅಪಾರ" ಎಂದು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು.

ಸರಳವಾಗಿ ನಡೆದ ಈ ಕಾರ್ಯಕ್ರಮದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಆಜೀವ ಸದಸ್ಯರಾದ ಸುರೇಶ್ ಜಗಕಲ್, ಇಬ್ರಾಹಿಂ ಸಾಬ್ ಭೂವಾಜಿ, ಸಾಬಣ್ಣ ಬಡಿಗೇರ್, ಹಮೀದ್ ಸಾಬ್, ಸಂಗಮೇಶ್ ಅರವಿ, ಮಲ್ಲಪ್ಪ ಗೌಡೂರ್, ಆಶಾ ಕಾರ್ಯಕರ್ತರ ಸಂಘದ ಕಾರ್ಯದರ್ಶಿ ಗೌರಮ್ಮ ಹೊಸಮನಿ, ಉಮಾದೇವಿ, ರೇಣುಕಾ, ನಾಗಮ್ಮ, ಭೀಮಮ್ಮ, ರೇಣುಕಾ ಶಿಲ್ಪ ಆಶಾ ಕಾರ್ಯಕರ್ತರು, ವಿವಿಧ ಸಂಘಟನೆಯ ಪದಾಧಿಕಾರಿಗಳು, ಕನ್ನಡ ಅಭಿಮಾನಿಗಳು, ಸಾಹಿತ್ಯ ಆಸಕ್ತರು, ಸೇರಿದಂತೆ ಅನೇಕ ಗಣ್ಯರು ಉಪಸ್ಥಿತರಿದ್ದರು.

# ಬಸವಕಲ್ಯಾಣಕ್ಕೆ ರೈಲು ಸಂಪರ್ಕ ಕಲ್ಪಿಸಿ



**ಬೀದರ್: ಜೂ.4:** ಬಸವಾದಿ ಶರಣರ ಕರ್ಮಭೂಮಿ ಬಸವಕಲ್ಯಾಣಕ್ಕೆ ರೈಲು ಸಂಪರ್ಕ ಕಲ್ಪಿಸಬೇಕು ಎಂದು ಬೇಮಳಖೇಡ ಹಿರೇಮಠ ಸಂಸ್ಥಾನದ ಡಾ. ರಾಜಶೇಖರ ಶಿವಾಚಾರ್ಯ ಒತ್ತಾಯಿಸಿದ್ದಾರೆ. ಬೀದರನಲ್ಲಿ ಈಚೆಗೆ ಈ ಕುರಿತು ರೈಲ್ವೆ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ ಅವರಿಗೆ ಮನವಿ ಪತ್ರ ಸಲ್ಲಿಸಿದರು.

ಬಸವಕಲ್ಯಾಣದ ಅನುಭವ ಮಂಟಪ ವಿಶ್ವದ ಮೊದಲ ಸಂಸತ್ತು ಎಂದೇ ಹೆಸರಾಗಿದೆ. ಬಸವಣ್ಣನವರ ಕಾಯಕ- ದಾಸೋಹ ತತ್ವ, ಸಾಮಾಜಿಕ ಕ್ರಾಂತಿಯಿಂದಾಗಿ ಈ ನೆಲ ವಿಶ್ವಮಾನ್ಯವಾಗಿದೆ. ರಾಜ್ಯ ಸರ್ಕಾರ ಬಸವಕಲ್ಯಾಣದಲ್ಲಿ ಭವ್ಯ ನೂತನ ಅನುಭವ ಮಂಟಪ ನಿರ್ಮಿಸುತ್ತಿದೆ. ಇಂದಲ್ಲ, ನಾಳೆ ಬಸವಕಲ್ಯಾಣ ಜಗತ್ತಿನ ಗಮನ ಸೆಳೆಯಲಿದೆ. ಎಲ್ಲೆಡೆಯ ಪ್ರವಾಸಿಗರನ್ನು ತನ್ನತ್ತ ಕೈಬೀಸಿ ಕರೆಯಲಿದೆ ಎಂದು ಗಮನ ಸೆಳೆದರು. ಈಗಾಗಲೇ ರಾಜ್ಯ ಹಾಗೂ ನೆರೆ ರಾಜ್ಯಗಳ ಭಕ್ತರು ಬಸವಕಲ್ಯಾಣಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಾರೆ. ನೂತನ ಅನುಭವ ಮಂಟಪ ನಿರ್ಮಾಣ ಆರಂಭವಾದ ನಂತರ ಈ ಸಂಖ್ಯೆ ಇನ್ನೂ ಹೆಚ್ಚಾಗಿದೆ ಎಂದು ತಿಳಿಸಿದರು.

ರೈಲ್ವೆ ಸಂಪರ್ಕವಾದರೆ ದೇಶ, ವಿದೇಶದ ಪ್ರವಾಸಿಗರ ದಂಡು ಬಸವಕಲ್ಯಾಣಕ್ಕೆ ಹರಿದು ಬರುವ ವಿಶ್ವಾಸ ಇದೆ. ರೈಲ್ವೆ ಸಂಪರ್ಕದಿಂದ ಪ್ರವಾಸಿಗರಿಗೆ ಅನುಕೂಲವಾಗುವ ಜತೆಗೆ ವ್ಯಾಪಾರ, ಉದ್ಯೋಗ, ಕೈಗಾರಿಕೆಗಳ ವೃದ್ಧಿಯಾಗಲಿದೆ. ಇದರಿಂದ ಜಿಲ್ಲೆಯ ಆರ್ಥಿಕ ಅಭಿವೃದ್ಧಿಗೆ ನೆರವಾಗಲಿದೆ ಎಂದು ಮನವರಿಕೆ ಮಾಡಿದರು.

ಹುಮನಾಬಾದ್ ಇಲ್ಲವೇ ಕಮಲಾಪುರದಿಂದ ಬಸವಕಲ್ಯಾಣಕ್ಕೆ ರೈಲು ಮಾರ್ಗ ನಿರ್ಮಿಸಬೇಕು. ಭಾರತೀಯ ರೈಲ್ವೆಯೊಂದಿಗೆ ಬಸವಕಲ್ಯಾಣವನ್ನು ಜೋಡಿಸಬೇಕು ಎಂದು ಬೇಡಿಕೆ ಮಂಡಿಸಿದರು. ತಮ್ಮ ಮನವಿಗೆ ಸ್ಪಂದಿಸಿದ ಸಚಿವರು, ಬಸವಕಲ್ಯಾಣಕ್ಕೆ ರೈಲು ಸಂಪರ್ಕ ಕಲ್ಪಿಸುವ ದಿಸೆಯಲ್ಲಿ ಅಗತ್ಯ ಕ್ರಮ ಕೈಗೊಳ್ಳುವ ಭರವಸೆ ನೀಡಿದ್ದಾರೆ ಎಂದು ಡಾ. ರಾಜಶೇಖರ ಶಿವಾಚಾರ್ಯ ತಿಳಿಸಿದ್ದಾರೆ.

ಅಪೆಕ್ಸ್ ಬ್ಯಾಂಕ್ ನಿರ್ದೇಶಕ ಉಮಾಕಾಂತ ನಾಗಮಾರಪಳ್ಳಿ, ಗುರುಪಾದಪ್ಪ ನಾಗಮಾರಪಳ್ಳಿ ಮಲ್ಟಿ ಸೂಪರ್ ಸ್ಪೆಷಾಲಿಟಿ ಸಹಕಾರ ಆಸ್ಪತ್ರೆಯ ಅಧ್ಯಕ್ಷ ಸೂರ್ಯಕಾಂತ ನಾಗಮಾರಪಳ್ಳಿ, ಕೇಂದ್ರ ಸರ್ಕಾರದ ರಾಜ್ಯ ಅಭಿವೃದ್ಧಿ, ಸಮನ್ವಯ ಹಾಗೂ ಮೇಲುಸ್ತುವಾರಿ ಸಮಿತಿಯ ಸದಸ್ಯ ಶಿವಯ್ಯ ಸ್ವಾಮಿ, ಡಾ. ಚಂದ್ರಕಾಂತ ಗುದಗೆ, ಸಂಜುಕುಮಾರ ಸಿದ್ದಾಪುರ, ರಮೇಶ ಅರಳಿ ಇದ್ದರು.

# ಬಾಲ್ಯವಿವಾಹಕ್ಕೆ ಸಹಕರಿಸಿದರೆ ನಿರ್ದಾಕ್ಷಿಣ್ಯ ಕ್ರಮ: ಜಿಪಂ ಸಿಇಓ ಎಚ್ಚರಿಕೆ



ಯುವ ಮಾರ್ಗ ಸುದ್ದಿ

**ರಾಯಚೂರು,ಜೂ.4**–ರಾಯಚೂರ ಜಿಲ್ಲೆಯಲ್ಲಿ ಬಾಲ್ಯವಿವಾಹ ಸಂಪೂರ್ಣವಾಗಿ ನಿಷೇಧಿಸಬೇಕು ಹಾಗೂ ಒಂದು ವೇಳೆ ಬಾಲ್ಯವಿವಾಹಗಳಿಗೆ ಯಾರಾದರು ಸಹಕರಿಸುತ್ತಿರುವುದು ಕಂಡು ಬಂದಲ್ಲಿ ಅಂತವರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಜರುಗಿಸಬೇಕು ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ರಾಹುಲ್ ತುಕಾರಾಮ ಪಾಂಡ್ವೆ ಅವರು ಅಧಿಕಾರಿಗಳಿಗೆ ಕಟ್ಟುನಿಟ್ಟಿನ ನಿರ್ದೇಶನ ನೀಡಿದರು.

ನಗರದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಕಚೇರಿಗೆ ಭೇಟಿ ನೀಡಿ ಸಿಡಿಪಿಒಗಳು, ಮಹಿಳಾ ಕಲ್ಯಾಣ ಅಧಿಕಾರಿ, ಮಕ್ಕಳ ರಕ್ಷಣಾ ಅಧಿಕಾರಿಗಳೊಂದಿಗೆ ಏರ್ಪಡಿಸಿದ್ದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಬಾಲ್ಯವಿವಾಹ ಪ್ರಕರಣಗಳನ್ನು ತಡೆಯಲು ಇಲಾಖೆಯ ಅಧಿಕಾರಿಗಳು ಇದುವರೆಗೂ ಯಾವ ಯಾವ ಕ್ರಮಗಳನ್ನು ಕೈಗೊಂಡಿದ್ದಾರೆ ಎನ್ನುವುದರ ಬಗ್ಗೆ ಮಾಹಿತಿ ಪಡೆದುಕೊಂಡ ಸಿಇಓ ಅವರು, ಎಸ್‌ಎಎಂ ಹಾಗೂ ಎಂಎಎಂ ಪ್ರಕರಣಗಳನ್ನು ಕಡಿತಗೊಳಿಸಲು ರೂಪಸಿಲಾಗಿರುವ ಯೋಜನೆಗಳ ಬಗ್ಗೆ ಚರ್ಚಿಸಿದರು.

ಮಕ್ಕಳ ಆರೋಗ್ಯ ಕಾಪಾಡುವಲ್ಲಿ ಮಹಿಳಾ ಮತ್ತು ಮಕ್ಕಳ ಇಲಾಖೆಯ ಜವಾಬ್ದಾರಿ ಹೆಚ್ಚು ಇದೆ. ಸರ್ಕಾರದ ಸೌಲಭ್ಯಗಳನ್ನು ಅರ್ಹ ಫಲಾನುಭವಿಗಳಿಗೆ ತಲುಪಿಸಲು ಪ್ರಾಮಾಣಿಕ ಪ್ರಯತ್ನ ಮಾಡಿ, ಆತ್ಮಸಾಕ್ಷಿಯಾಗಿ ಕರ್ತವ್ಯಗಳನ್ನು ನಿರ್ವಹಿಸಬೇಕು ಎಂದು ತಿಳಿಸಿದರು.

ಅಂಗನವಾಡಿ ಕೇಂದ್ರಗಳನ್ನು ಶುಚಿಯಾಗಿಡಲು ಹಾಗೂ ಕೇಂದ್ರಗಳನ್ನು ಆಕರ್ಷಕವಾಗಿ ನಿರ್ವಹಿಸುವ ಕಾರ್ಯಕರ್ತೆಯರಿಗೆ ಪ್ರೋತ್ಸಾಹಕರ ಬಹುಮಾನಗಳನ್ನು ನೀಡುವ ಬಗ್ಗೆ ಕ್ರಮ ಜರುಗಿಸುವುದಾಗಿ ಸಿಡಿಪಿಒಗಳಿಗೆ ಸಿಇಓ ಅವರು ತಿಳಿಸಿದರು.

ಹದಿಹರೆಯದವರ ಹಾಗೂ ಗರ್ಭಿಣಿ, ಬಾಣಂತಿಯರಿಗೆ ಪೌಷ್ಠಿಕಾಂಶ ಪೂರೈಕೆ ಮಾಡಬೇಕು. ಗ್ರಾಮ ಠಾಣಾ ವ್ಯಾಪ್ತಿಯಲ್ಲಿ ಅಂಗನವಾಡಿ ಕಟ್ಟಡ ನಿರ್ಮಾಣ ಮಾಡಲು ನಿವೇಶನ ಒದಗಿಸಲು ಆಯಾ ಗ್ರಾಮ ಪಂಚಾಯತಿಗಳು ಕ್ರಮ ಜರುಗಿಸುವಂತೆ ಸಿಇಓ ಅವರು ಸೂಚನೆ ನೀಡಿದರು.

ಅಂಗನವಾಡಿ ಕೇಂದ್ರಗಳಿಗೆ ಕಾಂಪೌಂಡ್ ವ್ಯವಸ್ಥೆ ಕಲ್ಪಿಸಬೇಕೆಂದು ಇಲಾಖೆಯ ಅಧಿಕಾರಿಗಳು ಸಿಇಓ ಅವರ ಗಮನಕ್ಕೆ ತಂದರು.

ತೀವ್ರ ಹಾಗೂ ಸಾಧಾರಣ ಅಪೌಷ್ಟಿಕತೆಯಿಂದ ಬಳಲುತ್ತಿರುವ ಮಕ್ಕಳ ಆರೈಕೆ ಹಾಗೂ ಅಪೌಷ್ಠಿಕತೆ ನಿವಾರಣಾ ಕ್ರಮಗಳ ಬಗ್ಗೆ ಚರ್ಚಿಸಿ ಅಗತ್ಯ ನಿರ್ದೇಶನಗಳನ್ನು ನೀಡಲಾಯಿತು. ಪಾಲಕರಲ್ಲಿ ಜಾಗೃತಿ ಮೂಡಿಸಲು ಆರೋಗ್ಯ ತಪಾಸಣೆ ಶಿಬಿರ ಆಯೋಜಿಸಬೇಕು ಹಾಗೂ ನ್ಯೂಟ್ರಿಷನ್ ಪುನರ್ವಸತಿ ಕೇಂದ್ರಗಳನ್ನು ಬಲಪಡಿಸಬೇಕೆಂದು ಸಭೆಯಲ್ಲಿ ತಿಳಿಸಲಾಯಿತು.

# ಬಿಜೆಪಿಯವರದ್ದು ನಕಲಿ ಕ್ಷಮೆ: ಸಚಿವ ಪ್ರಿಯಾಂಕ್ ಖರ್ಗೆ



**ಕಲಬುರಗಿ,ಜೂ.4**–ಕ್ಷಮೆ ಕೇಳುವುದರಲ್ಲಿ ಎರಡು ವಿಧ. ನೈಜ ಕ್ಷಮೆ ಮತ್ತು ಬಿಜೆಪಿಗರ ನಕಲಿ ಕ್ಷಮೆ! ನೈಜ ಕ್ಷಮೆಯ ಹಿಂದೆ ಪಶ್ಚಾತಾಪವಿರುತ್ತದೆ, ವಿಚಾರ ಪಕ್ವತೆ ಇರುತ್ತದೆ, ಜಾಗೃತಿ ಇರುತ್ತದೆ, ತಪ್ಪೆಸಗಿದ್ದಕ್ಕೆ ಗಿಲ್ಟ್ ಇರುತ್ತದೆ. ಬಿಜೆಪಿಯವರ ನಕಲಿ ಕ್ಷಮೆಗೆ ಕಾರಣಗಳೇ ಬೇರೆ, ಬಿಜೆಪಿಗರ ಕ್ಷಮೆಯಲ್ಲಿ ಪಶ್ಚಾತಾಪವಿರುವ ಬದಲು ಅಹಂಕಾರವಿರುತ್ತದೆ, ಅವರ ಕ್ಷಮೆಯ ಹಿಂದೆ ಅವಕಾಶವಾದಿತನ ಇರುತ್ತದೆ ಅಥವಾ ಕಾನೂನಿನ ಭಯವಿರುತ್ತದೆ, ಇಲ್ಲವೇ ಜನಾಕ್ರೋಶದ ಒತ್ತಡ ಇರುತ್ತದೆ ಅಷ್ಟೇ. ಬಿಜೆಪಿಗರದ್ದು ಸ್ವಯಂಪ್ರೇರಣೆಯ, ಜ್ಞಾನೋದಯದ ಕ್ಷಮೆ ಅಲ್ಲವೇ ಅಲ್ಲ ಎಂದು ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಮತ್ತು ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಟ್ವಿಟ್ ಮೂಲಕ ತೀಕ್ಷ್ಣವಾಗಿ ಟೀಕಿಸಿದ್ದಾರೆ.

ಬಿಜೆಪಿಗರ ಮನಃಪೂರ್ವಕವಲ್ಲದ ದುರಹಂಕಾರದ ಕ್ಷಮೆಗೆ ಉದಾಹರಣೆ ಹಲವು ಇವೆ. ಕಲಬುರಗಿ ಜಿಲ್ಲಾಧಿಕಾರಿಗಳಿಗೆ ಕ್ಷಮೆ ಕೇಳಿದ ಪರಿಷತ್ ಸದಸ್ಯ ರವಿಕುಮಾರ್ ಅವರು ಘನಂದಾರಿ ಕೆಲಸ ಮಾಡಿದವರಂತೆ ಮೆರವಣಿಗೆಯಲ್ಲಿ ಪೊಲೀಸ್ ಠಾಣೆಗೆ ಹೋಗುತ್ತಾರೆ ಎಂದರೆ ಅವರ ಕ್ಷಮೆ ಕೇವಲ ಬೂಟಾಟಿಕೆಯದ್ದು ಹೊರತು ಮನಃಪೂರ್ವಕವಾದುದಲ್ಲ. ನಟ ಪ್ರಕಾಶ್ ರಾಜ್ ಅವರನ್ನು ಅವಹೇಳನ ಮಾಡಿದ್ದ ಪ್ರತಾಪ್ ಸಿಂಹ ಕಾನೂನಿನ ಒತ್ತಡಕ್ಕೆ ಕ್ಷಮೆ ಕೇಳಿದ್ದಾರೆ. ಸೋಫಿಯಾ ಖುರೇಶಿಯವರ ಬಗ್ಗೆ ಕೆಟ್ಟದಾಗಿ ಮಾತನಾಡಿದ್ದ ವಿಜಯ್ ಷಾ ಜನಾಕ್ರೋಶಕ್ಕೆ ಕ್ಷಮೆ ಕೇಳಿದ್ದಾರೆ. ನನಗೆ ನಾಯಿ ಎಂದಿದ್ದ ನಾರಾಯಣ ಸ್ವಾಮಿಯವರು ಜನಾಕ್ರೋಶದ ಒತ್ತಡಕ್ಕೆ ಕ್ಷಮೆ ಕೇಳಿದ್ದಾರೆ.

ಬಿಜೆಪಿಯವರು ಕ್ಷಮೆ ಕೇಳುವುದರಲ್ಲಿ ಸಾವರ್ಕರ್ ಅವರ ಬದ್ಧತೆಯನ್ನಾದರೂ ತೋರಿಸಬೇಕು. ಸಾವರ್ಕರ್ ಮನಃಪೂರ್ವಕವಾಗಿ ಬ್ರಿಟಿಷರ ಕ್ಷಮೆ ಕೇಳಿ, ನಂತರ ಬ್ರಿಟಿಷರ ಜೊತೆ ನಿಂತು ಕೆಲಸ ಮಾಡಿದ್ದ ಅವರ ಪ್ರಾಮಾಣಿಕತೆಯನ್ನು ಅನುಸರಿಸಬೇಕು ಎಂದು ಅವರು ತಮ್ಮ ಎಕ್ಸ್ ಖಾತೆಯಲ್ಲಿ ಬರೆದುಕೊಂಡಿದ್ದಾರೆ.

# ಮರಳು ಸಾಗಾಣಿಕೆಗೆ ಅವಕಾಶ ನೀಡಿಸಾಗಾಣಿಕೆದಾರರಿಂದ ಮನವಿ



**ಬಳ್ಳಾರಿ, ಜೂ.04:** ಕಳೆದ ಹತ್ತಾರು ದಿನಗಳಿಂದ ಸ್ಥಗಿತಗೊಳಿಸಲಾಗಿರುವ ಮರಳು(ಉಸುಕು) ಸಾಗಾಣಿಯನ್ನು ಆರಂಭಿಸಬೇಕೆಂದು ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಉಪ ನಿರ್ದೇಶಕಿ ದ್ವಿತೀಯ ಅವರಿಗೆ ಜಿಲ್ಲಾಧಿಕಾರಿಗಳಿಗೆ ಬರೆದ ಮನವಿ ಪತ್ರವನ್ನು ಮರಳು ಸಾಗಾಣಿಕೆಯ ಲಾರಿ ಮಾಲೀಕರು, ಚಾಲಕರು ಮನವಿ ಸಲ್ಲಿಸಿದ್ದಾರೆ. ಮರಳು ಸಾಗಾಣಿಕೆಯನ್ನು ಸ್ಥಗಿತಗೊಳಿಸಿ ಎಂದು ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಉಪ ನಿರ್ದೇಶಕರ ಸೂಚನೆ ಮೇರೆಗೆ ಕಳೆದ ಹತ್ತು ದಿನಗಳಿಗೂ ಮೇಲ್ಪಟ್ಟು ಮರಳು ಸಾಗಣೆಕೆ ನಿಲ್ಲಿಸಲಾಗಿದೆ.

ತಾಲೂಕಿನ ಗಣಿ ಭೂವಿಜ್ಞಾನ ಇಲಾಖೆಯಿಂದ ಪರವಾನಗಿಯನ್ನು ಪಡೆದು ಸಾದಾ ಮರಳು ಗಣಿ ಗುತ್ತಿಗೆಗಳಿಂದ ಗಣಿಗಾರಿಕೆಯನ್ನು ಮಾಡಿ ಅದನ್ನು ತಾಲ್ಲೂಕಿನಾದ್ಯಂತ ಸರಬರಾಜು ಮಾಡಲಾಗುತ್ತಿತ್ತು. ಮಾಡುತಿತ್ತು. ಆದರೆ ಮರಳು ಸಂಗ್ರಹಗಾರರು (ಕಾಂಟ್ರಾಕ್ಟ್) ಮತ್ತು ನಮ್ಮನ್ನಾಳುವ ಜನರ ನಡುವೆ ಹೊಂದಾಣಿಕೆ ಕೊರತೆಯಿಂದ ಕಳೆದ ಎರೆಡು ವರ್ಷದಲ್ಲಿ ಈರೀತಿ ಆಗುತ್ತಿರುವುದು ಇದು ಮೂರನೇ ಬಾರಿ. ಮರಳು ಸಾಗಾಣಿಕೆಗೆ ಕೆಲ ದಿನಗಳಿಂದ ಪರವಾನಿಗೆ ನೀಡುತ್ತಿಲ್ಲ. ಸಕ್ರಮವಾಗಿ ಗಣಿಗಾರಿಕೆ ಮಾಡಿ ಸಂಗ್ರಹಿಸಿದ ಮರಳನ್ನು ಸಾಗಿಸಲು ಅಡ್ಡಿಪಡಿಸಿರುವುದರಿಂದ ಮರಳು ಸಾಗಾಣೆಯ ಲಾರಿ ಮಾಲೀಕರು ಮತ್ತು ಇದೇ ವೃತ್ತಿಯನ್ನು ನಂಬಿದ ವಾಹನ ಚಾಲಕ, ಕ್ಲೀನರ್ ಗಳು ದುಡಿಮೆ ಇಲ್ಲದೆ ಕುಳಿತುಕೊಳ್ಳಬೇಕಾಗಿದೆ. ಲಾರಿಗಳ ಸಾಲದ ಕಂತುಗಳನ್ನು ಕಟ್ಟಲು ಬಾಡಿಗೆ ಇಲ್ಲದೆ ಪರದಾಡುತ್ತಿದ್ದೇವೆ.

ಆದ್ದರಿಂದ, ಮರಳು ಸಾಗಾಣಿಕೆಯನ್ನೇ ನಂಬಿದ ವಾಹನ ಮಾಲೀಕರು, ಚಾಲಕರು ಮತ್ತು ಕ್ಲೀನರ್ ಗಳ ಬದುಕಿಗಾಗಿ ಸಕ್ರಮ ರೀತಿಯಲ್ಲಿ ಮರಳು ಸಾಗಾಣಿಕೆಗೆ ಅನುಮತಿ ನೀಡಿ ಎಂದು ಮನವಿ ಸಲ್ಲಿಸಿದ್ದಾರೆ ರಾಮಾಂಜಿನಿ, ಎಂ.ವೀರೇಶ್, ಲಕ್ಷ್ಮೀಪತಿ, ಸುರೇಶ್, ಬಿ.ರಾಜಕುಮಾರ್, ಬಿ.ಚಂದ್ರ ಮೊದಲಾದವರು ಮನವಿ ಸಲ್ಲಿಸಿದ್ದಾರೆ.

ಯುವ ಮಾರ್ಗ



# ಭಾರತದ ಪರ ನಿಲ್ಲದಂತೆ ಪಾಕ್ ಮಾಡಿಕೊಂಡ ಮನವಿ ತಿರಸ್ಕರಿಸಿದ ಮಲೇಷ್ಯಾ



**ವಿಶ್ವಸಂಸ್ಥೆ, ಜೂ.4–** ಕಾಶ್ಮೀರ ವಿಷಯವನ್ನು ಉಲ್ಲೇಖಿಸಿ ವಿಶ್ವಸಂಸ್ಥೆಯಲ್ಲಿ ಎಲ್ಲಾ ಆಪರೇಷನ್ ಸಿಂಧೂರ್ ಸಂಪರ್ಕ ಕಾರ್ಯಕ್ರಮಗಳನ್ನು ರದ್ದುಗೊಳಿಸಬೇಕೆಂಬ ಪಾಕಿಸ್ತಾನದ ಮನವಿಯನ್ನು ಮಲೇಷ್ಯಾ ಕಡೆಗಣಿಸಿದೆ ಎಂದು ಮೂಲಗಳು ತಿಳಿಸಿವೆ.

ಧರ್ಮದ ಕಾರ್ಡ್ ಆಡಲು ಪ್ರಯತ್ನಿಸುತ್ತಿರುವ ಪಾಕಿಸ್ತಾನಿ ರಾಯಭಾರ ಕಚೇರಿಯು, ಸಂಜಯ್ ಝಾ ನೇತೃತ್ವದ ನಿಯೋಗದ ಎಲ್ಲಾ 10 ಕಾರ್ಯಕ್ರಮಗಳನ್ನು ರದ್ದುಗೊಳಿಸುವಂತೆ ಮಲೇಷ್ಯಾ ಸರ್ಕಾರಿ ಅಧಿಕಾರಿಗಳನ್ನು ಒತ್ತಾಯಿಸಿತು, ನಾವು ಇಸ್ಲಾಮಿಕ್ ದೇಶ, ನೀವು ಇಸ್ಲಾಮಿಕ್ ದೇಶ. ಭಾರತೀಯ ನಿಯೋಗದ ಮಾತನ್ನು ಕೇಳಬೇಡಿ, ಮಲೇಷ್ಯಾದಲ್ಲಿ ಅವರ ಎಲ್ಲಾ ಕಾರ್ಯಕ್ರಮಗಳನ್ನು ರದ್ದುಗೊಳಿಸಿ ಎಂದು ಹೇಳಿದೆ.

ಪಾಕಿಸ್ತಾನದ ವಿನಂತಿಯನ್ನು ತಿರಸ್ಕರಿಸಿದ ಮಲೇಷ್ಯಾ ಸರ್ಕಾರವು ಎಲ್ಲಾ 10 ಪ್ರಸ್ತಾವಿತ ಕಾರ್ಯಕ್ರಮಗಳನ್ನು ಆಯೋಜಿಸಲು ಒಂಬತ್ತು ಸದಸ್ಯರ ನಿಯೋಗಕ್ಕೆ ಒಪ್ಪಿಗೆ ನೀಡಿತು. ಜಪಾನ್ , ದಕ್ಷಿಣ ಕೊರಿಯಾ, ಸಿಂಗಾಪುರ ಮತ್ತು ಇಂಡೋನೇಷ್ಯಾದಲ್ಲಿ ನಿಲುಗಡೆಗಳನ್ನು ಒಳಗೊಂಡ ನಿಯೋಗದ ಬಹುರಾಷ್ಟ್ರ ಪ್ರವಾಸಕ್ಕೆ ಮಲೇಷ್ಯಾ ಅಂತಿಮ ನಿಲ್ದಾಣವಾಗಿತ್ತು.

ಆಪರೇಷನ್ ಸಿಂಧೂರ್ ಸಂಪರ್ಕದ ಸಮಯದಲ್ಲಿ ಭಾರತೀಯ ನಿಯೋಗವು ಮಲೇಷ್ಯಾ ನಾಯಕರನ್ನು ಭೇಟಿ ಮಾಡುತ್ತದೆ.

ಜೆಡಿಯು ಸಂಸದ ಸಂಜಯ್ ಝಾ ನೇತೃತ್ವದ ಮಲೇಷ್ಯಾಕ್ಕೆ ಭಾರತೀಯ ನಿಯೋಗದಲ್ಲಿ ಬಿಜೆಪಿ ಸಂಸದರಾದ ಅಪರಾಜಿತಾ ಸಾರಂಗಿ, ಬ್ರಿಜ್ ಲಾಲ್, ಪ್ರದಾನ್ ಬರುವಾ ಮತ್ತು ಹೇಮಾಂಗ್ ಜೋಶಿ, ತೃಣಮೂಲ ಕಾಂಗ್ರೆಸ್‌ನ ಅಭಿಷೇಕ್ ಬ್ಯಾನರ್ಜಿ, ಸಿಪಿಎಂನ ಜಾನ್ ಬ್ರಿಟಾಸ್, ಕಾಂಗ್ರೆಸ್‌ನ ಸಲ್ಮಾನ್ ಖುರ್ಷಿದ್ ಮತ್ತು ಬದ್ರೇನ್ ಮತ್ತು ಫ್ರಾನ್ಸ್ ನ ಮಾಜಿ ಭಾರತೀಯ ರಾಯಭಾರಿ ಮೋಹನ್ ಕುಮಾರ್ ಇದ್ದರು.

ಪ್ರಧಾನಿ ಮಹಾತಿರ್ ಮೊಹಮ್ಮದ್ ಅವರ ಸಂಪುಟದಲ್ಲಿ ಮಾಜಿ ಸಚಿವರಾಗಿದ್ದ ವೈ.ಬಿ. ಸಿಮ್ ತ್ಸೆ ಕ್ಸಿನ್ ನೇತೃತ್ವದ ಮಲೇಷ್ಯಾದ ಪೀಪಲ್ಸ್ ಜಸ್ಟೀಸ್ ಪಾರ್ಟಿ (ಪಿಕೆಆರ್) ಅನ್ನು ಭಾರತೀಯ ನಿಯೋಗ ಭೇಟಿ ಮಾಡಿತು ಮತ್ತು ಆಪರೇಷನ್ ಸಿಂಧೂರ್ ಅಡಿಯಲ್ಲಿ ಭಾರತದ ದೃಢನಿಶ್ಚಯದ ವಿಧಾನವನ್ನು ಒತ್ತಿ ಹೇಳಿತು ಮತ್ತು ಭಯೋತ್ಪಾದನೆಯ ಬಗ್ಗೆ ಅದರ ಶೂನ್ಯ-ಸಹಿಷ್ಣುತೆಯ ನಿಲುವನ್ನು ಪುನರುಚ್ಚರಿಸಿತು.

# ಮೇ ತಿಂಗಳಲ್ಲಿ ದಾಖಲೆ 186 ಕೋಟಿ ವಹಿವಾಟು ನಡೆಸಿದ ಕೆಎಸ್‌ಡಿಎಲ್

**ಬೆಂಗಳೂರು,ಜೂ.4–** ಸರಕಾರಿ ಸ್ವಾಮ್ಯದ ಕರ್ನಾಟಕ ಸಾಬೂನು ಮತ್ತು ಮಾರ್ಜಕಗಳ ನಿಯಮಿತವು (ಕೆಎಸ್ಡಿಎಲ್) ಮೇ ತಿಂಗಳಲ್ಲಿ 186 ಕೋಟಿ ಮೌಲ್ಯದ ಉತ್ಪನ್ನಗಳನ್ನು ಮಾರಾಟ ಮಾಡುವ ಮೂಲಕ ಸಾರ್ವಕಾಲಿಕ ದಾಖಲೆ ಸ್ಥಾಪಿಸಿದೆ.

ಈ ಕುರಿತು ಮಾತನಾಡಿದ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ ಬಿ ಪಾಟೀಲ ಉದ್ಯಮದ 108 ವರ್ಷಗಳ ಇತಿಹಾಸದಲ್ಲೇ ಕೇವಲ ಒಂದು ತಿಂಗಳಲ್ಲಿ ಹೀಗೆ ಭಾರೀ ವಹಿವಾಟು ನಡೆಸಿರುವುದು ಇದೇ ಪ್ರಪ್ರಥಮ ಎಂದು ತಿಳಿಸಿದ್ದಾರೆ.

ಸಂಸ್ಥೆಗೆ ಮೇ ತಿಂಗಳಲ್ಲಿ 151.50 ಕೋಟಿ ರೂ. ವಹಿವಾಟಿನ ಗುರಿ ನಿಗದಿಪಡಿಸಲಾಗಿತ್ತು. ಆದರೆ ಇದಕ್ಕಿಂತ 35 ಕೋಟಿ ಹೆಚ್ಚಿನ ವಹಿವಾಟು ನಡೆಸುವ ಮೂಲಕ ಶೇ.125ರಷ್ಟು ಸಾಧನೆ ಮತ್ತು ಶೇ.15 ರಷ್ಟು ಬೆಳವಣಿಗೆ ಸಾಧಿಸಲಾಗಿದೆ. ಈ ವಹಿವಾಟಿನ ಪೈಕಿ ರಫ್ತಿನ ಮೂಲಕ 1.81 ಕೋಟಿ ರೂ. ಗಳಿಸಲಾಗಿದೆ. ರಫ್ತು ವಹಿವಾಟನ್ನು ವಾರ್ಷಿಕವಾಗಿ 150 ಕೋಟಿ ರೂ.ಗೆ ಕೊಂಡೊಯ್ಯುವ ಗುರಿ ಇದೆ ಎಂದು ಮಾಹಿತಿ ನೀಡಿದ್ದಾರೆ.

ಸಂಸ್ಥೆಯು ತಯಾರಿಸುವ ಮೈಸೂರು ಸ್ಯಾಂಡಲ್ ಸೋಪ್ ಸೇರಿದಂತೆ ಎಲ್ಲಾ 45 ಬಗೆಯ ಉತ್ಪನ್ನಗಳು ಬೆಂಗಳೂರು, ಚೆನ್ನೈ, ಹೈದರಾಬಾದ್, ಮುಂಬಯಿ, ಕೋಲ್ಕತ್ತ, ನವದೆಹಲಿ ಶಾಖೆಗಳಲ್ಲಿ ಮತ್ತು ಬೆಂಗಳೂರಿನ ನೇರ ಮಾರುಕಟ್ಟೆ ವಿಭಾಗದ




ಮೂಲಕ ನಿರೀಕ್ಷೆಗೂ ಮೀರಿ ಮಾರಾಟ ವಾಗಿವೆ. ಕೆಎಸ್ಡಿಎಲ್ ಉತ್ಪನ್ನಗಳಾದ ಸಾಬೂನು, ಶವರ್ ಜೆಲ್, ಅಗರಬತ್ತಿ ಮುಂತಾದವುಗಳಿಗೆ ವ್ಯಾಪಕ ಬೇಡಿಕೆ ಬರುತ್ತಿದೆ. ಸಂಸ್ಥೆಯಲ್ಲಿ ಗುಣಮಟ್ಟದ ಉತ್ಪಾದನೆ, ಬ್ರಾಂಡಿಂಗ್ ಮತ್ತು ಮಾರುಕಟ್ಟೆ ವಿಸ್ತರಣೆಗೆ ಕೈಗೊಂಡಿರುವ ಪ್ರಯತ್ನಗಳು ಫಲ ಕೊಡುತ್ತಿವೆ ಎಂದು ತಿಳಿಸಿದ್ದಾರೆ.

ಆಂಧ್ರಪ್ರದೇಶ ಮತ್ತು ತೆಲಂಗಾಣ ರಾಜ್ಯಗಳಲ್ಲೇ ಅತಿ ಹೆಚ್ಚು ಅಂದರೆ 85 ಕೋಟಿ ವಹಿವಾಟು ನಡೆದಿದೆ. ಉಳಿದ 100 ಕೋಟಿ ಕರ್ನಾಟಕ ಸೇರಿದಂತೆ ಇತರ ರಾಜ್ಯಗಳಲ್ಲಿ ಆಗಿದೆ ಎಂದು ಅವರು ಅಂಕಿಅಂಶ ನೀಡಿದ್ದಾರೆ.

ಈ ಹಿಂದೆ 2024ರ ಸೆಪ್ಟೆಂಬರ್ ತಿಂಗಳೊಂದರಲ್ಲೇ 178 ಕೋಟಿ ರೂ. ಮೌಲ್ಯದ ಉತ್ಪನ್ನಗಳನ್ನು ಮಾರಾಟ ಮಾಡಿದ್ದು ಇದುವರೆಗಿನ ದಾಖಲೆಯಾಗಿತ್ತು. ಈಗ ಇದನ್ನು ದಾಟಲಾಗಿದೆ. ಸಾಮಾನ್ಯವಾಗಿ ಕೆಎಸ್ಡಿಎಲ್ ಪ್ರತೀ ತಿಂಗಳೂ ಸರಾಸರಿ 135 ಕೋಟಿಗಳಿಂದ 140 ಕೋಟಿವರೆಗೂ ವಹಿವಾಟು ನಡೆಸುತ್ತದೆ. ಆದರೆ, ಮೇ ತಿಂಗಳಲ್ಲಿ ಇದಕ್ಕಿಂತ 41 ಕೋಟಿ ಹೆಚ್ಚು ವಹಿವಾಟು ದಾಖಲಾಗಿದೆ.

ಕಳೆದ ಎರಡು ವರ್ಷಗಳಲ್ಲಿ ಸಂಸ್ಥೆಯ ಕಾರ್ಯವಿಧಾನವನ್ನು ಹೆಚ್ಚು ದಕ್ಷಗೊಳಿಸಲಾಗಿದೆಯೇ ವಿನಾ ಯಾವ ಹೊಸ ಉಪಕರಣಗಳನ್ನೂ ಖರೀದಿಸಿಲ್ಲ. ಸದ್ಯದಲ್ಲೇ ಸಂಸ್ಥೆಯ ವತಿಯಿಂದ ಸುಗಂಧದ್ರವ್ಯಗಳನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಲಾಗುವುದು ಎಂದು ಕೆಎಸ್‌ಡಿಎಲ್ ಅಧ್ಯಕ್ಷ ಸಿ.ಎಸ್.ನಾಡಗೌಡ ವಿವರಿಸಿದ್ದಾರೆ.

# ಜೈನ ಮಂದಿರ ಶತಮಾನೋತ್ಸವಶಾಂತಿ ಸ್ನಾತ್ರ ಮಹಾ ಪೂಜೆ

**ಬಳ್ಳಾರಿ,ಜೂ.04:** ನಗರದ ತೇರು ಬೀದಿಯಲ್ಲಿರುವ ಶ್ರೀ ಪಾರ್ಶ್ವನಾಥ ಜೈನ್ ಶ್ವೇತಂಬರ್ ಮಂದಿರದ ಶತಮಾನೋತ್ಸವದ ಅಂಗವಾಗ ನಿನ್ನೆ ವಿಮಲ್ ಸಾಗರ್ ಸುರೀಶ್ವರ್ ಜೀ ಸಾನಿಧ್ಯದಲ್ಲಿ ಶಾಂತಿ ಸ್ನಾತ್ರ ಮಹಾ ಪೂಜೆ, ಅಭಿಷೇಕ, ಸ್ವಾಮೀಜಿಗಳ ಪ್ರವಚನ ನಡೆಯಿತು.

ಮಧ್ಯಾಹ್ನ 3 ಗಂಟೆಯಿಂದ ನಗರದ ಪುತ್ರಿಯರಿಂದ ವಿವಿಧ ಕಾರ್ಯಕ್ರಮ, ಸಂಜೆ ಸುಪ್ರಸಿದ್ಧ ಸಂಗೀತ ಕಲಾವಿದರಿಂದ ಸಾಂಸ್ಕೃತಿಕ ಕಾರ್ಯಕ್ರಮ ಜರುಗಿದವು.

ನಗರದ ಪಾಲಿಕೆ ಸದಸ್ಯೆ ಸುರೇಖ ಮಲ್ಲನಗೌಡ ಮೊದಲಾದವರು ಆಗಮಿಸಿ ಆಶೀರ್ವಾದ ಪಡೆದರು. ನಾಳೆ ಪಾರ್ಶ್ವನಾಥನ ಶೋಭಾಯಾತ್ರೆ ಬೆಳ್ಳಿಗೆ 8.30ಕ್ಕೆ ದೇವಸ್ಥಾನದಿಂದ ಪ್ರಾರಂಭ ಗೊಂಡು



ಜೈನ್ ಮಾರ್ಕೆಟ್ , ಹೆಚ್.ಆರ್.ಜಿ.ಸರ್ಕಲ್, ಕಾಳಮ್ಮ ಬೀದಿ, ಬೆಂಗಳೂರು ರೋಡ್ ಮುಖಾಂತರವಾಗಿ ಜೈನ ಮಂದಿರಕ್ಕೆ ಬಂದು ತಲುಪಲಿದೆಂದು ಜೈನ ಸಂಘದ ಕಾರ್ಯದರ್ಶಿ ರೋಷನ್ ಜೈನ್ ತಿಳಿಸಿದ್ದಾರೆ.

# "ಬಂಡೆ ಸಾಹೇಬ" ಚಲನಚಿತ್ರಕ್ಕೆ ದಕ್ಕಿದ ಪ್ರಶಸ್ತಿಕಲಾವಿದರ ಪ್ರತಿಭೆಗೆ ಸಿಕ್ಕ ಫಲ



**ಕಲಬುರಗಿ,ಜೂ.4–** ಕುಖ್ಯಾತ ರೌಡಿಯ ಕಾರ್ಯಾಚರಣೆಯಲ್ಲಿ ಗುಂಡೇಟಿಗೆ ಬಲಿಯಾದ ಅಮರ ದಿ.ಮಲ್ಲಿಕಾರ್ಜುನ ಬಂಡೆ ಅವರ ಸಹಸದ ಕುರಿತು ನಿರ್ಮಾಣಗೊಂಡ ಬಂಡೆ ಸಾಹೇಬ (ದಿ ಪವರ್ ಆಫ್ ಪೊಲೀಸ್) ಕನ್ನಡ ಚಲನ ಚಿತ್ರಕ್ಕೆ ಚಿತ್ರ ಸಂತೆ ಸಂಸ್ಥೆಯಿಂದ ಅತ್ಯತ್ತಮ ಪ್ರಶಸ್ತಿ ಸಿಕ್ಕಿದೆ.

ಕಲಬುರಗಿಯ ಮಲ್ಲಿಗೆ ಸಿನಿ ಕಂಬೈನ್ಸ್ ಸಂಸ್ಥೆಯಡಿ ನಿರ್ಮಾಣಗೊಂಡ ಬಂಡೆ ಸಾಹೇಬ ಚಿತ್ರಕ್ಕೆ ಉತ್ತಮ ಬಯೋಗ್ರಾಶಫಿಕಲ್ ಚಿತ್ರವೆಂದು ಬೆಂಗಳೂರಿನ ಪ್ರತಿಷ್ಠಿತ ಚಿತ್ರ ಸಂತೆ ಸಂಸ್ಥೆ ಇಚೇಗೆ ಶಿವಮೊಗ್ಗದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಚಿತ್ರ ನಿರ್ಮಾಪಕರಾದ ಗೋಪಣ್ಣ ದೊಡ್ಡಮನಿ ಅವರಗೆ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಈ ಸಂದರ್ಭದಲ್ಲಿ ಬಿಗ್ ಬಾಸ್ ಖ್ಯಾತಿಯ ಹಾಗೂ ಚಲನ ಚಿತ್ರ ನಟಿ ಅನುಷಾ ರೈ ಅವರು, ಪ್ರಶಸ್ತಿ ಪ್ರದಾನ ಮಾಡಿದರು, ದಿನೇಶ ಗುರೂಜಿ, ಚಲನಚಿತ್ರ ನಟರಾದ ಸಂತೋಷ ರಾಮ, ಖ್ಯಾತ ನ್ಯಾಯವಾದಿ ಹಾಗೂ ಚಲನಚಿತ್ರ ನಟಿ ವೇದಾ ಶಾಂತರಾಜ ಮೈಸೂರ ಸೇರಿದಂತೆ ವಿವಿಧಕ್ಷೇತ್ರಗಳ ಗಣ್ಯಮಾನ್ಯರು ಭಾಗವಹಿಸಿದ್ದರು.

# ಸಂಡೂರಿನ ಹಸಿರನ್ನುಳಿಸಲು ಪ್ರಯತ್ನಿಸೋಣ–ಶಾಸಕಿ




**ಸಂಡೂರು:ಮೇ: 4:** ಹಿಂದುಳಿದ ಸಮಾಜದಲ್ಲಿ ಯಾರು ಶ್ರೀಮಂತರಲ್ಲ ಎಲ್ಲರೂ ದುಡಿದು ತಿನ್ನುವವರೇ ಪ್ರತಿ ಸಮಾಜದಲ್ಲಿ ಆರ್ಥಿಕ ಪರಿಸ್ಥಿತಿ ಕ್ಲಿಷ್ಠಕರವಾಗಿದೆ. ಸಂಡೂರಿನಲ್ಲಿ ಲಾರಿಗಳ ಓಡಾಟ ವಿಪರೀತವಾಗಿದೆ. ವಿಶೇಷ ದಿವ್ಯವಿಕಲಚೇತನರು ಟ್ರಾಫಿಕ್ ಕಾನೂನು ಪಾಲನೆ ಮಡಿ ವಾಹನಗಳನ್ನು ಬಹಳ ಜಾಗೃತಿಯಿಂದ ಚಾಲನೆ ಮಾಡಬೇಕಾಗಿದೆ. ಸಂಡೂರು ಯಾವಾಗಲು ಅಚ್ಚ ಹಸಿರಿನಿಂದ ಕೂಡಿತ್ತು ಅದರೆ ಗಣಿ ಪರಭಾವದಿಂದ ಗಿಡಮರಗಳನ್ನು ಬೆಳೆಸಲು ಹಿನ್ನಡೆಯಾಗಿದೆ. ಅದನ್ನು ಸರಿಪಡಿಸುವುದಕೋಸ್ಕರ ಗಿಡ ಮರಗಳನ್ನು ನೆಡುವ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದೇವೆ ಉತ್ತಮ ಪರಿಸರವನ್ನು ಕಾಪಾಡಿದಂತಾಗುತ್ತದೆ. ಪರಿಸರವನ್ನು ಕಾಪಾಡುವುದರಿಂದ ಉತ್ತಮ ಆಮ್ಲಜನಕ ಸಿಗಲು ಸಾಧ್ಯ, ಆಮ್ಲ ಜನಕಕ್ಕೆ ಮತ್ತೊಂದು ಹೆಸರೇ ಪ್ರಾಣವಾಯು ಎನ್ನುತ್ತಾರೆ. ಆರೋಗ್ಯವಂತರಾಗಿ ಸಧೃಡ ಕಾಯಯಾರಾಗಬೇಕಾದರೆ ಸ್ವಚ್ಚತೆಯ ಜೊತೆಗೆ ಪರಿಸರವನ್ನು ಕಾಪಡಿಕೊಳ್ಳಬೇಕಗಿದೆ. ತೋಟಗಾರಿಕೆ, ಅರಣ್ಯ ಇಲಾಖೆಯ ಅದಿಕಾರಿಗಳ ಜೊತೆಗೆ ನಾನು ಮಾತನಡಿದ್ದೇನೆ. ಗಿಡಗಳನ್ನು ಬೆಳೆಸುವವರು ಸಂಡೂರನ್ನು ಸ್ವಚ್ಚ ಸದಾ ಹಚ್ಚ ಹಸಿರಾಗಿ ಮಾಡಲು ಅಸಕ್ತಿ ಉಳ್ಳವರು ನಿಮ್ಮ ಮನೆಗಳಲ್ಲಿ ಗಿಡಗಳನ್ನು ನೆಡಲು ಅಪೇಕ್ಷೇಪಟ್ಟರೆ ಉಚಿತವಾಗಿ ಗಿಡಗಳನ್ನು ನೀಡುತ್ತಾರೆ ಇದರ ಸದುಪಯೋಗ ಪಡೆದುಕೊಳ್ಳಲು ಸಂಡೂರು ವಿಧಾನಸಭಾ ಕ್ಷೇತ್ರದ ಶಾಸಕಿ ಅನ್ನಪೂರ್ಣ ಈ.ತುಕರಾಂ ರವರು ತಿಳಿಸಿದರು.

ಅವರು ಸಂಡೂರು ಪಟ್ಟಣದ ಪುರಸಭಾ ಕಛೇರಿಯ ಅವರಣದ ಹೊರಗಡೆ ಅಂಬೇಡ್ಕರ್ ಸಂಘಕ್ಕೆ 702 ಖರ್ಚಿ, ಅಂಗವಿಕಲರಿಗೆ 8 ತ್ರಿಚಕ್ರವಾಹನ, ವಾಲ್ಮೀಕಿ ಸಂಘಕ್ಕೆ 695 ಖರ್ಚಿ ಮತ್ತು ಇತರೆ ಪರಿಕರ ಟೌನ್ ಹಾಗೆ 185 ಖರ್ಚಿ ಒಟ್ಟು 1582 ಪರಿಕರಗಳನ್ನು ವಿತರಿಸಿ ಮಾತನಾಡಿದರು. ಸೈಯದ್ ಮುಜಮಿಲ್ ಕೆ.ನಬೀರಸೂಲ್, ಭಾಗ್ಯಮ್ಮ, ಜಿ.ಅಂಬಿಕಾ, ದುರುಗಪ್ಪ, ರಾಜಣ್ಣ, ನಾಗಮ್ಮ. ಕೆ. ಶಾಂತಮ್ಮ ಹೀಗೆ ಮುಸ್ಲಿಂ ಇಬ್ಬರಿಗೆ ಲಿಂಗಾಯತರು ಇಬ್ಬರಿಗೆ ಮರಾಠ , ಕುರುಬ ಪ.ಜಾತಿ. ಪ.ಪಂಗಡ ತಲಾ ಒಂದೊಂದು ತ್ರಿಚಕ್ರವಾಹನಗಳನ್ನು ವಿತ ರಿಸಿ ಮಾಥನಡಿದರು. ಈ ಸಂದರ್ಭದಲ್ಲಿ ಪುರಸಭೆಯ ಮುಖ್ಯಾಧಿಕಾರಿ ಕೆ.ಜಯಣ್ಣ. ಪುರಸಭಾ ಅಧ್ಯಕ್ಷ ಸಿರಾಜ್ ಹುಸೇನ್, ಉಪಾಧ್ಯಕ್ಷೆ ಎಂ.ಸಿ. ಲತಾ ಉಜ್ಜಪ್ಪ. ಎಲ್.ಹೆಚ್. ಶಿವಕುಮರ್, ಕೆ.ವಿ. ಸುರೇಶ್, ಅಬ್ದುಲಾ ಮುನಾಫ್, ಮಾತನಾಡಿದರು. ಸಮಾಜ ಕಲ್ಯಾಣ ಇಲಾಖೆಯ ಪುರಸಭಾ ವತಿಯಿಂದ ಶಾಸಕಿ ಅನ್ನಪೂರ್ಣ ತುಕರಾಂ ಅವರನ್ನು ಸನ್ಮಾನಿಸಲಾಯಿತು. ಪುರಸಭಾ ಸದಸ್ಯರಾದ ಅಗಸರ ಪಂಪಣ್ಣ, ಹನುಮೇಶ್, ಬ್ರಹ್ಮಯ್ಯ, ಸಿ.ಕೆ. ಅಶೋಕ, ಕೊಂಚಗೇರಿ ಹರೀಶ್, ಆಶಾನರಸಿಂಹ, ಯರೆಣ್ಮಮ್ಮ, ಹಟ್ಟಿ ರತ್ನಮ್ಮ, ದೀಪಾ ಘೋಡಕೆ. ವತ್ಸಲಾ, ಲಕ್ಷ್ಮೀ, ಲಕ್ಷ್ಮೀದೇವಿ, ಮಾಜಿ ಅಧ್ಯಕ್ಷರು, ಮಹಿಳಾ ಘಟಕದ ಅಶಾಲತಾ ಸೋಮಪ್ಪ, ವಾಲ್ಮೀಕಿ, ಅಂಬೇಡ್ಕರ್ ಸಂಘದ ಮುಖಂಡರು ಉಪಸ್ಥಿತರಿದ್ದರು. ನಿರೂಪಣೆ, ಸ್ವಾಗತ, ವಂದನಾರ್ಪಣೆಯನ್ನು ಯೋಜನಾಧಿಕಾರಿ ಪ್ರಭುರಾಜಹಗರಿನೆರವೇರಿಸಿದರು, ಪುರಸಭೆಯ ಅಧಿಕಾರಿ ವರ್ಗ, ಸಿಬ್ಬಂದಿಯವರು ಉಪಸ್ಥಿತರಿದ್ದರು. ಪ್ರಾಥನೆಯನ್ನು ಶಾಂತರವರು ನೆರವೇರಿಸಿದರು.

# ಗೂಢಚರ್ಯೆ ಆರೋಪ ಪಂಜಾಬ್‌ನ ಮತ್ತೊಬ್ಬ ಯೂಟ್ಯೂಬರ್ ಬಂಧನ





**ಮೊಹಾಲಿ,ಜೂ.4–** ಕಳೆದ 24 ಗಂಟೆಗಳಲ್ಲಿ ನಡೆದ ಎರಡನೇ ಪ್ರಮುಖ ಕಾರ್ಯಾಚರಣೆಯಲ್ಲಿ ಪಂಜಾಬ್ ಪೊಲೀಸರು ಮತ್ತೊಬ್ಬ ಪಾಕಿಸ್ತಾನಿ ಗೂಢಚಾರನನ್ನು ಬಂಧಿ ಸಿದ್ದಾರೆ. ಆರೋಪಿ ಯೂಟ್ಯೂಬರ್. ಘಟನೆಯ ಬಗ್ಗೆ ಮಾಹಿತಿ ನೀಡಿದ ಪಂಜಾಬ್ ಡಿಜಿಪಿ ಗೌರವ್ ಯಾದವ್, ರಾಜ್ಯ ವಿಶೇಷ ಕಾರ್ಯಾಚರಣೆ ಕೋಶ ಮೊಹಾಲಿಯ ರೂಪನಗರದ ಮಹಾಲನ್ ಗ್ರಾಮದ ನಿವಾಸಿ ಜಸ್ಬೀರ್ ಸಿಂಗ್ ಅವರನ್ನು ಬಂಧಿಸಿದೆ ಎಂದು ಹೇಳಿದ್ದಾರೆ.

ಪಾಕಿಸ್ತಾನದೊಂದಿಗೆ ಸಂಪರ್ಕ ಹೊಂದಿದ ಬೇಹುಗಾರಿಕೆ ಜಾಲದಲ್ಲಿ ಭಾಗಿಯಾಗಿದ್ದ ಯೂಟ್ಯೂಬರ್ ಜಸ್ಬೀರ್ ಸಿಂಗ್ ಅವರನ್ನು ಪಂಜಾಬ್ ಪೊಲೀಸರು ಮೊಹಾಲಿಯ ಬಂಧಿಸಿದ್ದಾರೆ. ಜಸ್ಬೀರ್ ಜಾನ್ ಮಹಲ್ ಎಂಬ ಯೂಟ್ಯೂಬ್ ಚಾನೆಲ್ ನಡೆಸುತ್ತಿದ್ದರು ಮತ್ತು ಪಿಐಒ ಶಕೀರ್ ಅಲಿಯಾಸ್ ಜಟ್ ರಾಂಧವಾ ಅವರೊಂದಿಗೆ ಸಂಪರ್ಕದಲ್ಲಿದ್ದರು ಎಂದು ಡಿಜಿಪಿ ಹೇಳಿದ್ದಾರೆ. ಹರಿಯಾಣ ಯೂಟ್ಯೂಬರ್ ಜ್ಯೋತಿ ಮಲ್ಹೋತ್ರಾ ಮತ್ತು ಪಾಕಿಸ್ತಾನಿ ಪ್ರಜೆ ಎಹ್ಸಾನ್-ಉರ್-ರಹೀಮ್ ಅಲಿಯಾಸ್ ಡ್ಯಾನಿಶ್ ಅವರೊಂದಿಗೆ ಸಂಪರ್ಕ ಹೊಂದಿದ್ದ ಆರೋಪವೂ ಅವರ ಮೇಲಿದೆ. ಪೊಲೀಸ್ ಮೂಲಗಳಿಂದ ಬಂದ ಮಾಹಿ ತಿಯ ಪ್ರಕಾರ, ಇತ್ತೀಚೆಗೆ ಹರಿಯಾಣದ ಹಿಸಾನಿಂದ ಬಂಧಿಸಲ್ಪಟ್ಟ ಜ್ಯೋತಿ ಮ ಲ್ಹೋತ್ರಾ ಅವರ ವಿಚಾರಣೆಯ ಸಮ ಯದಲ್ಲಿ ಆರೋಪಿ ಜಸ್ಬೀರ್ ಹೆಸರು ಹೊರಬಿದ್ದಿದೆ. ಈ ಆರೋಪಿ ಜ್ಯೋತಿ ಮಲ್ಹೋತ್ರಾ ಜೊತೆ ಸಂಬಂಧ ಹೊಂದಿದ್ದ. ಅವರು ಹಲವು ಬಾರಿ ಪರಸ್ಪರ ಸಂಭಾಷಣೆ ನಡೆಸಿದ್ದಾರೆ. ಜ್ಯೋತಿ ಮಲ್ಹೋತ್ರಾ ಮೂಲಕ ಆರೋಪಿ ಜಸ್ಬೀರ್, ಉಚ್ಚಾಟಿತ ಪಾಕಿಸ್ತಾನಿ ಹೈಕಮಿಷನ್ ಅಧಿಕಾರಿ ಎಹ್ಸಾನ್ ಉರ್ ರಹೀಮ್ ಅಲಿಯಾಸ್ ಡ್ಯಾನಿಶ್ ಅವರನ್ನು ಸಂಪರ್ಕಿಸಿದ್ದ ಎಂದು ಹೇಳಲಾಗುತ್ತಿದೆ. ಆರಂಭಿಕ ತನಿಖೆಯಲ್ಲಿ, ಪೊಲೀಸರು ಆರೋಪಿಯ ಮೊಬೈಲ್ ನಿಂದ ಕೆಲವು ಆಕ್ಷೇಪಾರ್ಹ ಫೋಟೋಗಳು ಮತ್ತು ವೀಡಿಯೊಗಳನ್ನು ಪತ್ತೆ ಹಚ್ಚಿದ್ದಾರೆ. ಪಾಕಿಸ್ತಾನಿ ಗುಪ್ತಚರ ಸಂಸ್ಥೆಯ ಕೆಲವು ಜನರ ಸಂಖ್ಯೆಗಳು ಸಹ ಅವನ ಫೋನ್‌ನಲ್ಲಿ ಕಂಡುಬಂದಿವೆ. ಅವನು ಈ ಸಂಖ್ಯೆಗಳನ್ನು ಬೇರೆ ಬೇರೆ ಹೆಸರುಗಳಲ್ಲಿ ಉಳಿಸಿಕೊಂಡಿದ್ದ.

ಯುವ ಮಾರ್ಗ



## ಅನಾರೋಗ್ಯಪೀಡಿತನಾಗಿದ್ದ ವಯೋವೃದ್ಧ ಸಾವು



ಯುವ ಮಾರ್ಗ ಸುದ್ದಿ

**ರಾಯಚೂರು,ಜೂ.4–**ನಗರದ ಪಶ್ಚಿಮ ಪೊಲೀಸ್ ಠಾಣೆ ವ್ಯಾಪ್ತಿಯ ರಾಯಚೂರು–ಲಿಂಗಸುಗೂರು ರಸ್ತೆಯ ಕೃಷಿ ವಿಶ್ವವಿದ್ಯಾಲಯದ ಮುಂದೆ ಸುಮಾರು ಅಂದಾಜು 60 ವರ್ಷದ ಅಪರಿಚಿತ ಗಂಡಸು ಅನಾರೋಗ್ಯದಿಂದ ಬಳಲಿ, ಚಿಕಿತ್ಸೆಗಾಗಿ ರಿಮ್ಸ್ ಆಸ್ಪತ್ರೆಗೆ ಸೇರಿಸಿದಾಗ ಚಿಕಿತ್ಸೆ ಫಲಿಸದೇ ಮೃತಪಟ್ಟಿದ್ಧಾನೆ.

ದಿನಾಂಕ 29.05.2025 ರಂದು ಈ ವ್ಯಕ್ತಿಯನ್ನು 108 ಅಂಬ್ಯುಲೆನ್ಸ್ ಮೂಲಕ ರಿಮ್ಸ್ ಆಸ್ಪತ್ರೆಗೆ ಕರೆತಂದು ಚಿಕಿತ್ಸೆಗೆ ಸೇರಿಕೆ ಮಾಡಿದಾಗ ಆತನು ತನ್ನ ಹೆಸರು ಮತ್ತು ವಿಳಾಸ ತಿಳಿಸಿರುವುದಿಲ್ಲ. ಈ ಬಗ್ಗೆ ವಾಟ್ಸಪ್ ಮೂಲಕ ಪ್ರಚಾರ ಮಾಡಿದರು ಸಹ ಆತನ ರಕ್ತ ಸಂಬಂಧಿಕರು ಪತ್ತೆಯಾಗಿರುವದಿಲ್ಲ. ಈತನಿಗೆ ಚಿಕಿತ್ಸೆ ನೀಡುವ ಕಾಲಕ್ಕೆ ರಿಮ್ಸ್ ಆಸ್ಪತ್ರೆಯಲ್ಲಿ ದಿನಾಂಕ 31.05.2025 ರಂದು ಸಂಜೆ 5.50ಕ್ಕೆ ಮೃತಪಟ್ಟಿರುವದಾಗಿ ಎಂ.ಎಲ್.ಸಿ. ಸ್ವೀಕೃತವಾಗಿರುತ್ತದೆ.

ಈ ವ್ಯಕ್ತಿಯ ಮೃತದೇಹವನ್ನು ಶವಾಗಾರದಲ್ಲಿರಿಸಿದ್ದು, ಮೃತನು ತೆಳ್ಳನೆಯ ಮೈಕಟ್ಟು, ಕೋಲುಮುಖ ಅಂದಾಜು 5 ಫೀಟ್ 6 ಇಂಚು ಎತ್ತರ, ತಲೆಯಲ್ಲಿ ಕಪ್ಪು ಮಿಶ್ರಿತ ಬಿಳಿ ಗಡ್ಡ, ಬೂದು ಬಣ್ಣದ ನೈಟ್ ಪ್ಯಾಂಟ್ ಧರಿಸಿದ್ದು, ಕೈಯಲ್ಲಿ ರುದ್ರಾಕ್ಷಿ ಸುತ್ತಿಕೊಂಡಿರುತ್ತಾನೆ. ಈ ಮೃತನ ರಕ್ತ ಸಂಬಂಧಿಕರ ಮಾಹಿತಿ ದೊರೆತಲ್ಲಿ ಪಶ್ಚಿಮ ಪೊಲೀಸ್ ಠಾಣೆಯ ದೂರವಾಣಿ ಸಂಖ್ಯೆ: 08532232570, ಪಶ್ಚಿಮ ಪೊಲೀಸ್ ಠಾಣೆಯ ಪಿ.ಎಸ್.ಐ ಮೊಬೈಲ್ ಸಂಖ್ಯೆ: 9480803847ಗೆ ಸಂಪರ್ಕ ಮಾಡಬಹುದಾಗಿದೆ ಎಂದು ಪಶ್ಚಿಮ ಪೊಲೀಸ್ ಠಾಣೆಯ ತನಿಖಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಪಾಲಿಟೆಕ್ನಿಕ್ ಡಿಪ್ಲೋಮಾ ಕೋರ್ಸುಗಳಿಗೆ ಆಫ್‌ಲೈನ್ ಮೂಲಕ ಪ್ರವೇಶ

**ರಾಯಚೂರು,ಜೂ.4–**2025–26ನೇ ಸಾಲಿನಲ್ಲಿ ರಾಯಚೂರಿನ ಸರ್ಕಾರಿ ಪಾಲಿಟೆಕ್ನಿಕ್‌ದಲ್ಲಿ ಎರಡು ವರ್ಷಗಳ ಐ.ಟಿ.ಐ, ದ್ವಿತೀಯ ಪಿ.ಯು.ಸಿ ವಿಜ್ಞಾನ, ದ್ವಿತೀಯ ಪಿ.ಯು.ಸಿ ತಾಂತ್ರಿಕ ವಿಷಯಗಳಲ್ಲಿ ಉತ್ತೀರ್ಣರಾಗಿರುವ ಅರ್ಹ ಅಭ್ಯರ್ಥಿಗಳಿಗೆ ಸರ್ಕಾರಿ ಮತ್ತು ಅನುದಾನಿತ ಪಾಲಿಟೆಕ್ನಿಕ್‌ಗಳಲ್ಲಿ ಲ್ಯಾಟರಲ್ ಎಂಟ್ರಿ ಸ್ಕೀಂ ಮುಖಾಂತರ 2ನೇ ವರ್ಷ / 3ನೇ ಸೆಮಿಸ್ಟರ್ ಡಿಪ್ಲೋಮಾ ಕೋರ್ಸುಗಳಿಗೆ ಆಫ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಪ್ರವೇಶಾತಿ ಇಚ್ಚಿಸುವ ಅರ್ಹ ವಿದ್ಯಾರ್ಥಿಗಳು ಇಲಾಖೆಯ ಅಧಿಕೃತ ವೆಬ್‌ಸೈಟ್:ಜಣಜಇ.ಇಚಿಡಿಟಿಚಿಣಚಿಞಚಿ.ರಠತಿ.ಟಿ ಠಡಿ ಜಣಜಣಜಛಿ.ಇಚಿಡಿಟಿಚಿಣಚಿಞಚಿ.ರಠತಿ.ಟಿ/ ಇಚಿಡಿಣಜಛಿಟುಛಿಚಿಟ ನಲ್ಲಿ ಅರ್ಜಿಯನ್ನು ಡೌನ್ ಲೋಡ್ ಮಾಡಿಕೊಂಡು, ಭರ್ತಿ ಮಾಡಿ ಜೂನ್ 14ರೊಳಗೆ ಪಾಲಿಟೆಕ್ನಿಕ್ ಪ್ರಾಚಾರ್ಯರಿಗೆ ವಿದ್ಯಾರ್ಹತೆಯ ದಾಖಲೆಗಳೊಂದಿಗೆ ಸಲ್ಲಿಸತಕ್ಕದ್ದು. ಅರ್ಹ ಅಭ್ಯರ್ಥಿಗಳ

## ವಿದ್ಯಾರ್ಥಿನಿಯರಿಂದ ಪರಿಸರ ಜಾಥಾ

**ರಾಯಚೂರು,ಜೂ.4–** ಇಲ್ಲಿನ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ವಿಶ್ವ ಪರಿಸರ ದಿನಾಚರಣೆ–2025 ನಿಮಿತ್ತ ಪರಿಸರ ಜಾಥಾವನ್ನು ಇಂದು ಹಮ್ಮಿಕೊಳ್ಳಲಾಗಿದೆ. ಇದೆ ವೇಳೆ ಸರ್ಕಾರಿ ಬಾಲಕಿಯರ ಪ್ರೌಢಶಾಲೆ ಆವರಣದಲ್ಲಿ ಸಸಿ ನೆಡಲಾಗುವುದು.

'ಜಾಗತಿಕವಾಗಿ ಪ್ಲಾಸ್ಟಿಕ್ ಮಾಲಿನ್ಯವನ್ನು ಕೊನೆಗೊಳಿಸುವುದು' ಈ ಘೋಷವಾಕ್ಯದೊಂದಿಗೆ ಅಂದು ಬೆಳಗ್ಗೆ 10.30ಕ್ಕೆ ನಗರದ ಮಹಾತ್ಮಗಾಂದಿ ಕ್ರೀಡಾಂಗಣದ ಮುಖ್ಯದ್ವಾರದಿಂದ ಜಾಥಾ ಆರಂಭವಾಗಿ ಅಂಬೇಡ್ಕರ್ ವೃತ್ತದಿಂದ ಸ್ಟೇಷನ್ ರಸ್ತೆಯಲ್ಲಿನ ಸರ್ಕಾರಿ ಬಾಲಕಿಯರ ಪ್ರೌಢಶಾಲೆವರೆಗೆ ಸಂಚರಿಸಲಿದೆ.

ಸರ್ಕಾರಿ ಬಾಲಕಿಯರ ಪ್ರೌಢಶಾಲೆಯ ವಿದ್ಯಾರ್ಥಿಗಳ ಸಹಯೋಗದಲ್ಲಿ ನಡೆಯುವ ಪರಿಸರ ಜಾಥಾಕ್ಕೆ ಜಿಲ್ಲಾಧಿಕಾರಿಗಳಾದ ನಿತೀಶ್.ಕೆ ಚಾಲನೆ ನೀಡಲಿದ್ಧಾರೆ. ಮಹಾನಗರ ಪಾಲಿಕೆಯ ಆಯುಕ್ತರಾದ ಜುಬಿನ್ ಮೊಹಾಪಾತ್ರ, ಅರಣ್ಯ ಇಲಾಖೆಯ ಉಪ ಅರಣ್ಯ ಸಂರಕ್ಷಣಾಧಿಕಾರಿಗಳಾದ ಪ್ರವೀಣ್ ಎಸ್., ಸಾರ್ವಜನಿಕ ಶಿಕ್ಷನ ಇಲಾಖೆಯ ಉಪ ನಿರ್ದೇಶಕರಾದ ಕೆ.ಡಿ.ಬಡಿಗೇರ ಉಪಸ್ಥಿತರಿರುವರು.

ಸುದ್ದಿ ಮತ್ತು ಜಾಹೀರಾತಿಗಾಗಿ ಸಂಪರ್ಕಿಸಿ
9743497111, 9743496111

# ಕೃತಗ್ಯತಾ ಸಂಸ್ಥೆಯ ಕೊಡುಗೆ ಅಪಾರ : ಕೆ.ಡಿ.ಬಡಿಗೇರ್

ಯುವ ಮಾರ್ಗ ಸುದ್ದಿ

**ಲಿಂಗಸುಗೂರು,ಜೂ.4–** ಕೃತಗ್ಯತಾ ಸಂಸ್ಥೆ ಸರ್ಕಾರಿ ಶಾಲೆಯ ಮಕ್ಕಳಿಗೆ ನೀಡುವುದು ತುಂಬಾ ಸಂತೋಷದ ವಿಷಯವಾಗಿರುತ್ತದೆ ಸಂಸ್ಥೆ ಕೊಡುಗೆ ಅಪಾರವಾಗಿದ್ದು ಎಂದು ಉಪನಿರ್ದೇಶಕ ಕೆ ಡಿ ಬಡಿಗೇರ್ ಅಭಿಪ್ರಾಯಪಟ್ಟರು.



ತಾಲೂಕಿನ ಸಮೀಪ ಸರಕಾರಿ ಕಿರಿಯ ಪ್ರಾಥಮಿಕ ಶಾಲೆ ಯಳಗುಂದಿ ಶಾಲೆಯಲ್ಲಿ ಬೆಂಗಳೂರಿನ ಕೃತಗ್ಯತಾ ಸಂಸ್ಥೆ ಉಚಿತವಾಗಿ ದೇಣಿಗೆ ನೀಡಿರುವ ತಾಲೂಕಿನ 5 ಶಾಲೆಯ ನಲಿಕಲಿ ತರಗತಿ ಮಕ್ಕಳಿಗೆ 228 ಚೇರ್ ಹಾಗೂ 39 ರೌಂಡ್ ಟೇಬಲ್ ಅಲ್ಲದೆ ತಾಲೂಕಿನ 9 ಶಾಲೆಯ 1000 ಮಕ್ಕಳಿಗೆ 6000 ನೋಟ್ ಬುಕ್ ಹಾಗೂ ಬರವಣಿಗೆ ಸಾಮಗ್ರಿಗಳ ಕಿಟ್ ನ್ನು ಉಚಿತ ವಿತರಿಸುವ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಕಲ್ಯಾಣ ಕರ್ನಾಟಕ ಭಾಗಕ್ಕೆ ಎನ್‌ಜಿಓ ಸಂಸ್ಥೆಗಳ ಕೊಡುಗೆ ಕಡಿಮೆ ಪ್ರಮಾಣದಲ್ಲಿದ್ದು ವಿಶೇಷವಾಗಿ ಲಿಂಗಸುಗೂರು ತಾಲೂಕಿಗೆ ಕೃತಗ್ಯತಾ ಸಂಸ್ಥೆಯಿಂದ ಇಂದು ಭರಪೂರ ಕೊಡುಗೆಗಳಿದ್ದು ಈ ಹಿಂದಿನ ಶೈಕ್ಷಣಿಕ ವರ್ಷದಲ್ಲಿ 09 ಶಾಲೆಗಳಿಗೆ ವಿಜ್ಞಾನ ಪ್ರಯೋಗಾಲಯದ ಪರಿಕರಗಳನ್ನು ಕೊಡುಗೆ ನೀಡಿದ್ದು ಕೃತಗ್ಯತಾ ಸಂಸ್ಥೆಯು ಲಿಂಗಸೂಗೂರು ತಾಲೂಕಿಗೆ ವರವಾಗಿ ಬಂದಿದೆ ಎಂದರು.

ಕ್ಷೇತ್ರ ಶಿಕ್ಷಣಾಧಿಕಾರಿ ಹುಂಬಣ್ಣ ರಾಠೋಡ್ ಮಾತನಾಡಿ, ಗ್ರಾಮೀಣ ಭಾಗದಲ್ಲಿ ಒಂದನೇ ತರಗತಿಯಿಂದ ಮೂರನೇ ತರಗತಿಗೆ ದಾಖಲಾಗುವ ಮಕ್ಕಳಿಗೆ ನಲಿಕಲಿ ಚೇರ್ ಹಾಗೂ ಟೇಬಲಗಳು ಮಕ್ಕಳನ್ನು ಬಹುಬೇಗನೆ ಶಾಲೆಗೆ ಆಕರ್ಷಿಸುವುದರಿಂದ ಶಾಲೆಗಳಲ್ಲಿ ದಾಖಲಾತಿ ಹಾಗೂ ಹಾಜರಾತಿ ಹೆಚ್ಚಳವಲ್ಲದೆ ಗುಣಾತ್ಮಕ ಶಿಕ್ಷಣಕ್ಕೆ ಸಹಕಾರಿಯಾಗಲಿವೆ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಮೌನೇಶ್ವರ ಚಾರಿ ಶಿಕ್ಷಕರು ಜನತಾಪುರ ಪ್ರಾಸ್ತಾವಿಕವಾಗಿ ಮಾತನಾಡಿದರು. ಯಳಗುಂದಿ ಶಾಲೆಯ ಶಿಕ್ಷಕ ಮೈಲಾರಿ ಎಂ ಇವರು ನಿರೂಪಿಸಿದರು. ಸಮಾರಂಭದಲ್ಲಿ ಶಿಕ್ಷಣ ಸಂಯೋಜಕರಾದ ಬಸವರಾಜ್ ಬಿಆರ್‌ಬಿ ಗಂಗಾಧರ್. ತಾಲ್ಲೂಕು ಶಿಕ್ಷಕರ ಸಂಘದ ಅಧ್ಯಕ್ಷ ಗುರುಸಂಗಯ್ಯ ಗಣಾಚಾರಿ, ಎನ್ ಜಿಓ ನಿರ್ದೇಶಕ ವೀರೇಶ್ ಶಿರಸಗಿ, ಶಿಕ್ಷಕ ಜಗದೀಶ್ ವಿಶ್ವಕರ್ಮ, ದಾವಲ್ ಸಾಬ್, ಶರಣಬಸವ, ಜಗದೀಶ್ ತೊಗರಿ, ಸೋಮಶೇಖರ್, ಕಲ್ಲೇಶ್ ಜಗ್ಗಲ್, ಎಸ್‌ಡಿಎಂಸಿ ಅಧ್ಯಕ್ಷ ದ್ಯಾಮಣ್ಣ ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

## ಸಿರವಾರ–ದೇವದುರ್ಗ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಸಚಿವ, ಶಾಸಕರಿಂದ ಭೂಮಿ ಪೂಜೆ

ಯುವ ಮಾರ್ಗ ಸುದ್ದಿ

**ಸಿರವಾರ,ಜೂ.4–**ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮದ 2.30 ಕೋಟಿ ರೂ. ವೆಚ್ಚದ ಸಿರವಾರ–ದೇವದುರ್ಗ ರಸ್ತೆ ಡಾಂಬ ರೀಕರಣ ಅಭಿವೃದ್ಧಿ ಕಾಮಗಾರಿಗೆ ಸಿರವಾರ ಪಟ್ಟಣದ ಬಸವ ವೃತ್ತದಲ್ಲಿ ಸಣ್ಣ ನೀರಾವರಿ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರಾದ



ಎನ್.ಎಸ್.ಬೋಸರಾಜು ಹಾಗೂ ಮಾನ್ವಿ ಕ್ಷೇತ್ರದ ಶಾಸಕರಾದ ಜಿ.ಹಂಪಯ್ಯ ನಾಯಕ ಅವರು ಮಂಗಳವಾರ ಭೂಮಿ ಪೂಜೆ ನೆರವೇರಿಸಿದರು.

ನಂತರ ಮಾತನಾಡಿದ ಸಚಿವ ಬೋಸರಾಜು ಅವರು ಸಿರವಾರದ ದೇವದುರ್ಗ ರಸ್ತೆಯ ನಾಗಡದಿನ್ನಿ ಕ್ರಾಸ್ ನಿಂದ ಪಟ್ಟಣದ ಬಸವ ವೃತ್ತದವರೆಗೆ ರಸ್ತೆ ತೀರಾ ಹದಗೆಟ್ಟು ಹೋಗಿತ್ತು ಜನರಿಗೆ ತೊಂದರೆಯಾಗಬಾರದು ಎಂದು

ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮದಿಂದ 2.30 ಕೋಟಿ ರೂ. ವೆಚ್ಚದಲ್ಲಿ ರಸ್ತೆ ಡಾಂಬರೀಕರಣ ಕೈಗೆತ್ತಿಕೊಳ್ಳಲಾಗಿದೆ ಕಾಮಗಾರಿಯ ಗುಣಮಟ್ಟ ಕಾಯ್ದುಕೊಳ್ಳುವಂತೆ ಸ್ಥಳದಲ್ಲಿದ್ದ ಇಲಾಖೆಯ ಅಧಿಕಾರಿಗಳಿಗೆ ಸೂಚನೆ ನೀಡಿದರು.

ನಂತರ ಶಾಸಕ ಜಿ.ಹಂಪಯ್ಯ ನಾಯಕ ಮಾತನಾಡಿ ಕ್ಷೇತ್ರದ ಜನರ ನಿರೀಕ್ಷೆಯಂತೆ ಅಭಿವೃದ್ಧಿಗೆ ಆದ್ಯತೆ ನೀಡಲಾಗುತ್ತಿದೆ, ದೇವದುರ್ಗ ಕ್ರಾಸ್ ನಲ್ಲಿ ತುಂಬಾ ದೂಳಿನಿಂದ ಜನ ರೋಸಿಹೋಗಿದ್ದರು ಇದನ್ನು ಗಮನದಲ್ಲಿ ಇಟ್ಟುಕೊಂಡು ಈ ರಸ್ತೆ ಅಭಿವೃದ್ಧಿಗೆ ಆದ್ಯತೆ ನೀಡಿ ಇಂದು ಚಾಲನೆ ನೀಡಿದ್ದೇವೆ ಮುಂದಿನ ದಿನಗಳಲ್ಲಿ ಹಂತ–ಹಂತವಾಗಿ ಅಭಿವೃದ್ಧಿಗೆ ಆದ್ಯತೆ ನೀಡ ಲಾಗುತ್ತದೆ ಎಂದರು.

ಈ ಸಂದರ್ಭದಲ್ಲಿ ಚುಕ್ಕಿ ಸೂಗಪ್ಪ ಸಾಹುಕಾರ್, ಪ.ಪಂ.ಅಧ್ಯಕ್ಷ ವೈ.ಭೂಪನಗೌಡ, ತಹಸೀಲ್ದಾರ್ ರವಿ ಎಸ್. ಅಂಗಡಿ, ಯುವ ಮುಖಂಡರಾದ ಅರಕೇರಿ ಶಿವಶರಣ ಸಾಹುಕಾರ್, ರಮೇಶ ದರ್ಶನಕರ್, ಚುಕ್ಕಿ ಉಮಾಪತಿ ಸಾಹುಕಾರ್, ಮಾಜಿ ತಾ.ಪಂ. ಅಧ್ಯಕ್ಷ ದಾನನಗೌಡ, ಎಂ.ನಿಂಬಯ್ಯಸ್ವಾಮಿ, ಪ.ಪಂ. ಸದಸ್ಯರಾದ ಹಸೇನ ಅಲಿ, ಮೌಲಾಸಾಬ ವರ್ಚಸ್, ಸೂರಿ ದುರುಗಣ್ಣ ನಾಯಕ, ಹೆಚ್.ಮಾರ್ಕಪ್ಪ, ಹಾಜಿ ಚೌದ್ರಿ, ಮುಖಂಡರಾದ ಜಿ.ವೀರೇಶ ಸಾಹುಕಾರ್, ಗಡ್ಲ ಚನ್ನಪ್ಪ ನಾಯಕ, ಜೆ.ಅಬ್ರಹಾಂ ಹೊನ್ನಟಗಿ, ಶ್ರೀಧರಸ್ವಾಮಿ, ಶಾಂತಪ್ಪ ದೊಡ್ಮನಿ, ಚಂದ್ರು ಹಡಪದ್, ಚಾಂದ್ ಪಾಶ ಕವಿತಾಳ, ಬಗರ್ ಹುಕುಂ ಸಮಿತಿ ಸದಸ್ಯ ರಂಗನಾಥ ನಾಯಕ, ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮದ ಕಾರ್ಯಪಾಲಕ ಅಭಿಯಂತರರಾದ ಜಗದೇವು ಮೋತಿ, ಎಇಇ ವೆಂಕಟೇಶ ಹುಲಿಗೇರಿ, ಪ.ಪಂ.ಮುಖ್ಯಾಧಿಕಾರಿ ತಿಮ್ಮಪ್ಪ ಜಗ್ಲಿ, ಗುತ್ತೇದಾರ ಗೋವಿಂದರಾಜ್, ಪಾಂಡು ಪವಾರ್, ಪಟ್ಟಣ ಪಂಚಾಯತಿ ಸದಸ್ಯರು, ಪಟ್ಟಣದ ಮುಖಂಡರು, ವಿವಿಧ ಇಲಾಖೆಯ ಸಿಬ್ಬಂದಿ ವರ್ಗ ಇದ್ದರು.

## ಸರ್ಕಾರಿ ಜಮೀನಿನಲ್ಲಿ ಸಾಗುವಳಿ ಮಾಡುತ್ತಿರುವ ಭೂಹಿನ ರಹಿತರಿಗೆ ಪಟ್ಟ ನೀಡುವಂತೆ ಮನವಿ

ಯುವ ಮಾರ್ಗ ಸುದ್ದಿ

**ಮಾನ್ವಿ,ಜೂ.4–** ಪಟ್ಟಣದ ತಹಸೀಲ್ದಾರ್ ಕಚೇರಿಯಲ್ಲಿ ಅಖಿಲ ಭಾರತ ಕಿಸಾನ್ ಸಂಘಟನೆ ತಾಲೂಕು ಸಮಿತಿ ವತಿಯಿಂದ ತಹಸೀಲ್ದಾರ್ ರವರಿಗೆ ಗ್ರೇಡ್–2 ತಹಸೀಲ್ದಾರ್ ಅಬ್ದುಲ್ ವಾಹಿದ್ ರವರ ಮೂಲಕ ಮನವಿ ಸಲ್ಲಿಸಿ




ತಾ.ಅಧ್ಯಕ್ಷರಾದ ವಿ .ಮುದುಕಪ್ಪ ನಾಯಕ ಮಾತನಾಡಿ ತಾಲೂಕಿನ ಕುರ್ಡಿ,ಕಂಬಳತ್ತಿ,ಗೋರ್ಕಲ್,ಚೀಕಲಪರ್ವಿ ,ಬುದ್ದಿನ್ನಿ,ದದ್ದಲ್,ಜಾಗೀರಪನ್ನೂರು, ಮುರಾನಪೂರ್, ಮದ್ಲಾಪುರ್,ಹರವಿ, ವಲ್ಕಂದಿನ್ನಿ, ಗ್ರಾಮಗಳಲ್ಲಿ ಹಾಗೂ ಮಾನ್ವಿ ಪಟ್ಟಣ ಹಾಗೂ ಸಿರವಾರ ತಾಲೂಕಿನ ಕೆ.ಗುಡದಿನ್ನಿ,ಗಣದಿನ್ನಿ,ಬಲ್ಲಟ್ಟಗಿ,ಲಕ್ಕಮದಿನ್ನಿ ಗ್ರಾಮಗಳಲ್ಲಿ ಕೂಡ ಅನೇಕ ಭೂಹಿನ ಬಡ ರೈತರು ವಿವಿಧ ಸರ್ವೆ ನಂ. ಸರ್ಕಾರಿ ಜಮೀನಿನಲ್ಲಿ ಹಲವು ವರ್ಷಗಳಿಂದ ಸಾಗುವಳಿ ಮಾಡುತ್ತ ಬಂದಿರುವ ರೈತರ ಜಮೀನುಗಳಿಗೆ ಕಂದಾಯ ಇಲಾಖೆಯ ಅಧಿಕಾರಿಗಳು ಶೀಘ್ರವೇ ಪಂಚನಾಮೆ ನಡೆಸಿ ನೋಂದಾಣಿ ಮಾಡಿಸಬೇಕು. ಮಾನ್ವಿ ತಾಲೂಕಿನ ಬುರಹಾನಪುರ ಗ್ರಾಮದಲ್ಲಿನ ವಿವಿಧ ಸರ್ವೆ ನಂಗಳಲ್ಲಿನ ಸರ್ಕಾರಿ ಜಮೀನಿನಲ್ಲಿ ಮಾನ್ವಿ,ಬುರಾನಪುರ,ಮುಸ್ಟೂರು,ಕಾತರಕಿ,ರಬ್ಬಣಕಲ್ ,ಚೀಕಲಪರ್ವಿ ಗ್ರಾಮಗಳ ವಸತಿ ರಹಿತರಿಗೆ ಈ ಜಮೀನಿನಲ್ಲಿ ಸರ್ಕಾರದಿಂದ ನಿವೇಶನ ಮಾಡಿ ಹಂಚಿಕೆ ಮಾಡಬೇಕು ಎಂದು ಒತ್ತಾಯಿಸಿದರು.

ಪಟ್ಟಣದ ಬಸವ ವೃತ್ತದಿಂದ ತಹಸೀಲ್ದಾರ್ ಕಚೇರಿಯವರೆಗೆ ಪ್ರತಿಭಟನೆ ಮೆರವಣಿಗೆ ನಡೆಸಿ ಮನವಿ ಸಲ್ಲಿಸಲಾಯಿತು.

ತಾ.ಉಪಾಧ್ಯಕ್ಷರಾದ ಆನಂದ ಭೋವಿ, ಆಂಜನೇಯ್ಯ ಬಲ್ಲಟಗಿ,ಯಲ್ಲಪ್ಪ ನಾಯಕ ಕುರ್ಡಿ, ಸೇರಿದಂತೆ ನೂರಾರು ರೈತರು ಪ್ರತಿ ಭಟನೆಯಲ್ಲಿ ಭಾಗವಹಿಸಿದರು.

## ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತಿ ಆಚರಣೆ



ಯುವ ಮಾರ್ಗ ಸುದ್ದಿ

**ಲಿಂಗಸುಗೂರು,ಜೂ.4–** ಪಟ್ಟಣದ ಹುಲಿಗುಡ್ಡ ಸಮೀಪ ಇರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತಿಯನ್ನು ಆಚರಿಸಲಾಯಿತು. ಪ್ರಾಂಶುಪಾಲ ಡಾ: ಹನುಮಂತಪ್ಪ ನಾಲ್ವಡಿ ಕೃಷ್ಣರಾಜ ಒಡೆಯರ್ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು.ಈ ಸಂದರ್ಭದಲ್ಲಿ ಗ್ರಂಥಾಪಾಲಕ ಡಾ: ಪರಮಾನಂದ ಸೇರಿ ಕಾಲೇಜಿನ ಉಪನ್ಯಾಸಕರು ಹಾಗೂ ಸಿಬ್ಬಂದಿಗಳು ಇದ್ದರು.

## ಸಮಾಜ ಕಲ್ಯಾಣ ಇಲಾಖೆ ವಸತಿ ನಿಲಯಕ್ಕೆ ಅರ್ಜಿ ಆಹ್ವಾನ : ರವೀಂದ್ರ ಉಪ್ಪಾರ

ಯುವ ಮಾರ್ಗ ಸುದ್ದಿ

**ಲಿಂಗಸುಗೂರು,ಜೂ.4–** ತಾಲೂಕಿನ ಸಮಾಜ ಕಲ್ಯಾಣ ಇಲಾಖೆ ಅಧೀನದಲ್ಲಿ ನಡೆಯುವ ಮೆಟ್ರಿಕ್ ನಂತರ ಹಾಗೂ ಮೆಟ್ರಿಕ್ ಪೂರ್ವ ಬಾಲಕ ಮತ್ತು ಬಾಲಕಿಯರ ವಿದ್ಯಾರ್ಥಿ ನಿಲಯದ ಪ್ರವೇಶಕ್ಕೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ ಎಂದು ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ರವೀಂದ್ರ ಉಪ್ಪಾರ ತಿಳಿಸಿದ್ದಾರೆ.



ಈ ಕುರಿತು ಪ್ರಕಟಣೆ ಹೊರಡಿಸಿರುವ ಅವರು, 2025–26ನೇ ಸಾಲಿನಲ್ಲಿ ಖಾಲಿಯಿರುವ ಮೆಟ್ರಿಕ್ ಪೂರ್ವ ಮೆಟ್ರಿಕ್ ನಂತರ ಲಿಂಗಸುಗೂರು, ಹಟ್ಟಿ, ಮಸ್ಕಿ, ಗುರುಗುಂಟಾ, ಆನೆಹೊಸೂರು, ಖೈರವಾಡಗಿ, ಬಯ್ಯಾಪೂರ, ಮಾವಿನಭಾವಿ, ನಾಗಲಾಪೂರ, ನಾಗರಹಾಳ, ಈಚನಾಳ, ಯಲಗಟ್ಟಾ, ರೋಡಲಬಂಡಾ ವಸತಿ ನಿಲಯ ಪ್ರವೇಶಕ್ಕೆ ಅರ್ಜಿ ಕರೆಯಲಾಗಿದೆ. http:// swdmis.karnataka.gov.in/ ಅರ್ಜಿ ಸಲ್ಲಿಸಬಹುದಾಗಿದೆ. 31 ಅಗಸ್ಟ್ ಅರ್ಜಿ ಸಲ್ಲಿಸಲು ಕೊನೆಯ ದಿನವಾಗಿರುತ್ತದೆ ಎಂದು ತಿಳಿಸಿದ್ದಾರೆ.

## ಬಾಡಿಗೆ ವಾಹನ ಒದಗಿಸಲು ಆಸಕ್ತರಿಂದ ಅರ್ಜಿ ಆಹ್ವಾನ

**ರಾಯಚೂರು,ಜೂ.4–**ರಾಷ್ಟ್ರೀಯ ಆರೋಗ್ಯ ಅಭಿಯಾನ ಯೋಜನೆ ಅಡಿಯಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಅಧೀನದಲ್ಲಿರುವ ಜಿಲ್ಲಾ ಕ್ಷಯರೋಗ ವಿಭಾಗದ ಜಿಲ್ಲಾ ಕ್ಷಯರೋಗ ನಿಯಂತ್ರಣಾಧಿಕಾರಿಗಳಿಗೆ 2025–26ನೇ ಸಾಲಿಗಾಗಿ 4 ಚಕ್ರದ 1 ಬಾಡಿಗೆ ವಾಹನ ಒದಗಿಸಲು ಆಸಕ್ತರಿಂದ ಅರ್ಜಿ ಆಹ್ವಾನಿಸಲಾಗಿದೆ.

ಆಸಕ್ತರು ಜೂನ್ 17ರ ಸಂಜೆ 5 ಗಂಟೆಯೊಳಗಾಗಿ ಅರ್ಜಿಯನ್ನು ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಜಿಲ್ಲಾ ಕ್ಷಯರೋಗ ನಿಯಂತ್ರಣಾಧಿಕಾರಿಗಳನ್ನು ಸಂಪರ್ಕ ಮಾಡಬಹುದಾಗಿದೆ ಎಂದು ಸದಸ್ಯ ಕಾರ್ಯದರ್ಶಿಗಳು ಹಾಗೂ ಜಿಲ್ಲಾ ಕ್ಷಯರೋಗ ನಿಯಂತ್ರಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಸಚಿವ ಎನ್.ಎಸ್.ಬೋಸರಾಜು ರವರಿಗೆ ಸನ್ಮಾನ



**ಮಾನ್ವಿ,ಜೂ.4–**ಪಟ್ಟಣದ ಮುಕ್ತಗುಚ್ಚ ಕಲ್ಮಠದಲ್ಲಿ ಶ್ರೀ ವೀರೂಪಾಕ್ಷ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳು ಗುರುವಾರ ಹುಟ್ಟು ಹಬ್ಬವನ್ನು ಆಚರಿಸಿಕೊಳ್ಳಲಿರುವ ರಾಜ್ಯ ಸಣ್ಣ ನೀರಾವರಿ ಹಾಗೂ ವಿಜ್ಞಾನ ತಂತ್ರಜ್ಞಾನ ಸಚಿವ ಎನ್.ಎಸ್.ಬೋಸರಾಜು ರವರನ್ನು ಸನ್ಮಾನಿಸಿ ಆಶೀರ್ವದಿಸಿದರು.

ಶಾಸಕ ಹಂಪಯ್ಯನಾಯಕ,ಮುಖಂಡರಾದ ವೀರೇಶ.ಡಿ,ತಾ.ಬ್ಲಾಕ್ ಕಾಂಗ್ರೇಸ್ ಅಧ್ಯಕ್ಷರಾದ ಅಬ್ದುಲ್ ಗಾಫೂರ್ ಸಾಬ್,ಮಹಾಂತೇಶಸ್ವಾಮಿ ರೌಡೂರು,ಸಣ್ಣ ಬಸವನಗೌಡ,ಸೈಯಾದ್ ಖಾಲೀದ್ ಖಾದ್ರಿ,ಅದ್ಯಪ್ಪಗೌಡ,ಕೃಪಾ ಸಾಗರ್ ಪಾಟೀಲ್, ಸೇರಿದಂತೆ ಇನ್ನಿತರರು ಇದ್ದರು.

Owned, Printed and published by **ANILKUMAR H** from Plot No. # 3-5-415/-A MANVI Pooja Rice Mill, Near Kataraki Road, Manvi Tq. Manvi, Dist, Raichur-584123, Printed at **MAA FRIENDS PRINTING PRESS,** Plot No. # 3-5-415/-A Pooja Rice Mill Near Kataraki Road, Manvi Tq. Manvi, Dist: Raichur-584123, State: Karnataka Editor: **ANILKUMAR H**